ಆತ್ಮಸ್ಪರ್ಶಿ ಗಾಂಧಿ

(ನಾಟಕ)

ಅಮ್ಮಿ ಎ.ಸಿ. ಚಂದ್ರಕುಮಾರ್

ಪ್ರಕಾಶಕರು

ಅಮ್ಮಿ ಎ.ಸಿ.ಹೇಮಮಾಲಿನಿ (ರೂಪ)

ನಂ.32, ನಾರಾಯಣ ಶೆಟ್ಟಿಪೇಟೆ, ಎಂ.ಎಸ್. ಲೇನ್, ಜೆ.ಎಂ.ರೋಡ್ ಕ್ರಾಸ್, ಬೆಂಗಳೂರು – 560 002

ಮೊಬೈಲ್: 8861112906 / 9902284390

ಆತ್ಮಸ್ಪರ್ಶಿ ಗಾಂಧಿ ಅಮ್ಮಿ ಎ.ಸಿ.ಚಂದ್ರಕುಮಾರ್, ನಂ.32, ನಾರಾಯಣ ಶೆಟ್ಟಿಪೇಟೆ, ಎಂ.ಎಸ್. ಲೇನ್, ಜೆ.ಎಂ.ರೋಡ್ ಕ್ರಾಸ್, ಬೆಂಗಳೂರು – 560 002
ಮೊಬೈಲ್: 8861112906

ಮುದ್ರಣ : 2019

ಪುಟಗಳು : 144

ಪ್ರತಿಗಳು : 1000

ಬೆಲೆ : 100/–

ಮುಖಪುಟ ವಿನ್ಯಾಸ : ಸಿ.ನಂದಕಿಶೋರ್

ಅಕ್ಷರ ಜೋಡಣೆ : ಸಿಎನ್‌ಕೆ ಕ್ರಿಯೇಶನ್ಸ್, ಬೆಂಗಳೂರು– 560 010 ಮೊಬೈಲ್ : 9880791947

ಮುದ್ರಣ : ಆಂಜನೇಯ ಪ್ರಿಂಟರ್ಸ್, ಕಾಟನ್‌ಪೇಟೆ, ಬೆಂಗಳೂರು

ಅರ್ಪಣೆ

ಬದುಕಲ್ಲಿ
ಅಡಿಗಡಿಗೆ
ಬಿದ್ದಾಗ
ಭುಜ ಕೊಟ್ಟ
ಬದುಕಿನ
ಬಾಹುಬಲಿ
ನನ್ನ ಅರ್ಧಾಂಗಿಗೆ
ಅಂತರಂಗದಿಂದ
ಅರ್ಪಣೆ

ಮುನ್ನುಡಿ

ಮಹಾತ್ಮ ಗಾಂಧಿಯನ್ನು ಕುರಿತು ಖ್ಯಾತ ವಿಜ್ಞಾನಿ ಆಲ್ಬರ್ಟ್ ಐನ್‌ಸ್ಟೈನ್ ಆಡಿದ "ರಕ್ತ ಮಾಂಸಗಳು ತುಂಬಿದ ಇಂಥ ಒಬ್ಬ ಮನುಷ್ಯ ಈ ಲೋಕದಲ್ಲಿ ನಡೆದಾಡಿದ್ದ ಎಂದರೆ, ಮುಂಬರುವ ಜನಾಂಗಗಳು ಅಚ್ಚರಿಪಡುತ್ತವೆ" ಎನ್ನುವ ಮಾತುಗಳನ್ನು ಭಾರತದ ಪ್ರಜಾಕೋಟಿ ಅದರಲ್ಲೂ ಮುಖ್ಯವಾಗಿ ಎಲ್ಲವೂ ನಾನೇ ನನ್ನದೇ ನನಗಾಗಿಯೇ ಎನ್ನುವ ಅಹಂಕಾರದಲ್ಲಿ ಓಲಾಡುತ್ತಿರುವ ಅವಿವೇಕಿ ರಾಜಕಾರಣಿಗಳು ಮತ್ತೆ ಮತ್ತೆ ಕೃತಜ್ಞತೆಯಿಂದ ಸ್ಮರಿಸಿಕೊಳ್ಳುತ್ತಲೇ ಇರಬೇಕಾಗುತ್ತದೆ. ಸ್ವಂತ ಸುಖ ಸಂತೋಷಗಳನ್ನು ನಿರ್ಲಕ್ಷಿಸಿ ದೇಶಕ್ಕಾಗಿ, ಜನರಿಗಾಗಿ, ಸ್ವಾತಂತ್ರ್ಯಕ್ಕಾಗಿ, ಸಹೋದರತೆಗಾಗಿ, ಸರ್ವೋದಯಕ್ಕಾಗಿ, ಸತ್ಯ–ಅಹಿಂಸೆಯ ಮಾರ್ಗ ಹಿಡಿದು ಬ್ರಿಟಿಷ್ ದೈತ್ಯ ಶಕ್ತಿಯನ್ನು ಮಣಿಸಿ ಜಗತ್ತಿಗೆ ಅಚ್ಚರಿಯನ್ನುಂಟು ಮಾಡಿದ್ದು ಮಾತ್ರವಲ್ಲ, ಹೊಸ ಶೈಲಿಯ ಹೋರಾಟಕ್ಕೆ ಲಕ್ಷಾಂತರ ಮಾನವೀಯ ಕಾಳಜಿಯ ಮಂದಿಗೆ ಆದರ್ಶವಾದ ಮೋಹನದಾಸ ಕರಮಚಂದ ಗಾಂಧಿ ಎಂಬ ಮಹಾತ್ಮನ ಜೀವನಗಾಥೆಯೇ ವಿಸ್ಮಯಕಾರಿಯಾದದ್ದು. ನನ್ನ ಜೀವನವೇ ನನ್ನ ಸಂದೇಶ ಎಂದು ಹೇಳಿದ್ದು ಮಾತ್ರವಲ್ಲದೆ ಬದುಕಿ ತೋರಿಸಿದ, ತೆರೆದ ಪುಸ್ತಕದಂಥ ತನ್ನ ಬದುಕನ್ನು ಸತ್ಯಾನ್ವೇಷಣೆಗಾಗಿಯೇ ಮೀಸಲಿರಿಸಿದ, ಅನಾಯಾಸವಾಗಿ ದೊರೆಯಬಹುದಾಗಿದ್ದ ಅತ್ಯುನ್ನತ ರಾಜಕೀಯ ಸ್ಥಾನಮಾನಗಳನ್ನು ಹತ್ತಿರ ಸುಳಿಯದಂತೆ ಎಚ್ಚರ ವಹಿಸಿ, ಸೆರೆಮನೆ ವಾಸದಲ್ಲೂ ಹೋರಾಟದ ಛಲವನ್ನು ಮತ್ತಷ್ಟು ಗಟ್ಟಿಯಾಗಿಸಿಕೊಂಡ, ಸ್ವಾತಂತ್ರ್ಯೋತ್ಸವ ಸಂಭ್ರಮದಲ್ಲಿ ಮುಳುಗದೆ ದೇಶ ಇಬ್ಭಾಗವಾಗಿ ಅಣ್ಣ ತಮ್ಮಂದಿರು ಶತ್ರುಗಳಾಗಿ ಹಿಂಸಾಚಾರದಲ್ಲಿ ತೊಡಗಿ ದ್ವೇಸಾಸೂಯೆಯಿಂದ ರಕ್ತ ಚೆಲ್ಲಾಡುವುದನ್ನು ಕಂಡು ಮರುಗಿದ, ಗಡಿಯಲ್ಲಿ ನಿರ್ಮಾಣವಾದ ಪ್ರಕ್ಷುಬ್ಧ ವಾತಾವರಣದಲ್ಲೂ ಬಿದ್ದವರನ್ನು ಮೇಲೆತ್ತಿ ನೊಂದವರಿಗೆ ಸಾಂತ್ವನ ಹೇಳಿದ, ದೇಶ, ಜನ

ಎಂದು ಹಂಬಲಿಸುತ್ತ ಕುಟುಂಬವನ್ನು ನಿರ್ಲಕ್ಷಿಸಿದರೆನ್ನುವ ಆಪಾದನೆಗೂ ಒಳಗಾದ, ದೇಶಕ್ಕಾಗಿ ಸರ್ವ ಸಮರ್ಪಣೆ ಮಾಡಿಕೊಂಡರೂ ಪ್ರಾರ್ಥನಾ ಸಭೆಯಲ್ಲೇ ದೇಶಭಕ್ತನ ಸೋಗಿನ ದೇಶದ್ರೋಹಿಯ ಗುಂಡಿಗೆ ಬಲಿಯಾಗಿ ಹುತಾತ್ಮನಾದ ಗಾಂಧಿಯ ಸ್ಥಾನದಲ್ಲಿ ಇನ್ನೊಬ್ಬರನ್ನು ಕಲ್ಪಿಸಿಕೊಳ್ಳುವುದು ಸಾಧ್ಯವೇ ಇಲ್ಲ. ಇಂಥ ಗಾಂಧಿಯನ್ನು ಬದಲಾದ ರಾಜಕೀಯ ಸಂದರ್ಭದಲ್ಲಿ ದೇಶದ್ರೋಹಿಯಂತೆ ಬಿಂಬಿಸುವ, ತಲೆತಿರುಕರಂತಿರುವ ಯುವಕ ಯುವತಿಯರನ್ನು ಗಾಂಧಿ ವಿರುದ್ಧ ಮಾತಾಡಲು, ಗಾಂಧಿಯನ್ನು ಅವಮಾನಿಸಲು ಛೂ ಬಿಟ್ಟು ತಮಾಷೆ ನೋಡುವ, ಗಾಂಧಿ ಜಯಂತಿಯನ್ನು ಗಾಂಧಿ ಚಿತ್ರಕ್ಕೆ ಗುಂಡಿಟ್ಟು ಸಂಭ್ರಮಿಸುವವರ ಮೇಲೆ ಕೇಸು ದಾಖಲಿಸದೆ, ಕಾದು ನೋಡೋಣವೆಂಬ ಕುತಂತ್ರ ಅನುಸರಿಸುವ ಮಹಾನಾಯಕರು ಹೊಸ ತಲೆಮಾರನ್ನೇ ಗಾಂಧಿ ವಿರುದ್ಧ ಎತ್ತಿಕಟ್ಟಲು ರಹಸ್ಯ ಯೋಜನೆಗಳನ್ನು ರೂಪಿಸುತ್ತಿರುವುದು ಮುಂದಿನ ದಿನಗಳಲ್ಲಿ ಈ ದೇಶಕ್ಕೆ ಒದಗಲಿರುವ ಮಹಾಕೇಡನ್ನು ಸೂಚಿಸುತ್ತದೆ. ಇಂಥ ವಿಷಮ ಸನ್ನಿವೇಶದಲ್ಲಿ, ಗಾಂಧಿ ಮೌನವಾಗಿಯೇ ಕಣ್ಣೀರನ್ನು ಮಿಡಿಯುತ್ತಿರುವ ಸಂದರ್ಭದಲ್ಲಿ ಪ್ರಜ್ಞಾವಂತರಾದವರು ತಮಗೆ ಹಿಡಿತವಿರುವ ಮತ್ತು ವಿಶ್ವಾಸವಿರುವ ಮಾಧ್ಯಮಗಳ ಮುಖೇನ ನಿಜವಾದ ಗಾಂಧಿಯನ್ನು ಹೊಸ ಪೀಳಿಗೆಗೆ ಪರಿಚಯ ಮಾಡಿಕೊಡುವುದನ್ನು ತಮ್ಮ ಕರ್ತವ್ಯ ಎಂದು ಭಾವಿಸಬೇಕಾಗಿದೆ. ಅಂಥ ಕೆಲಸವನ್ನು ಅಮ್ಮಿ ಚಂದ್ರಕುಮಾರ್ ಎಂಬ ಕಿರಿಯ ಗೆಳೆಯ, ನಾಟಕಗಳ ನಿರ್ದೇಶಕ, ಕಲಾವಿದ, ಪತ್ರಕರ್ತ, ಕನ್ನಡ ಹೋರಾಟಗಾರ 'ಆತ್ಮಸ್ಪರ್ಶಿ ಗಾಂಧಿ' ಎನ್ನುವ ನಾಟಕ ರಚನೆಯ ಮೂಲಕ ಮಾಡಲು ಹೊರಟಿರುವುದು ನನಗೆ ಸಂತೋಷವನ್ನು ಹೆಮ್ಮೆಯನ್ನೂ ಉಂಟು ಮಾಡಿದೆ.

'ಆತ್ಮಸ್ಪರ್ಶಿ ಗಾಂಧಿ' ಎನ್ನುವ ಈ ನಾಟಕ ಗಾಂಧಿತತ್ವ ಅಥವಾ ವಿಚಾರಧಾರೆಗಳ ಎಳೆಯೊಂದನ್ನು ಹಿಡಿದು ಪ್ರಸ್ತುತ ಕಾಲಘಟ್ಟದಲ್ಲಿ ಅದು ಎಷ್ಟರಮಟ್ಟಿಗೆ ಅನುಸರಣೆಗೆ ಯೋಗ್ಯವಾಗಿದೆ, ಜಾಗತೀಕರಣದ ಬಿರುಗಾಳಿಗೆ ಬುಡಕಡಿದ ಬಾಳೆಯಂತಾಗಿರುವ ಬದುಕುಗಳನ್ನು ಎತ್ತಿಕಟ್ಟುವ ಸಾಮರ್ಥ್ಯ ಅದಕ್ಕೆ ಎಷ್ಟರಮಟ್ಟಿಗೆ ಇದೆ. ಗಾಂಧಿಸ್ಮರಣೆಯೇ ಇಲ್ಲದೆ ಮಾನವೀಯ ಮೌಲ್ಯಗಳು ಹೇಗೆ ವಿನಾಶದತ್ತ ಚಲಿಸುತ್ತಿವೆ ಎನ್ನುವುದಕ್ಕೆ ಪುರಾವೆಗಳನ್ನು ಒದಗಿಸುತ್ತ ಗಾಂಧಿ ಪ್ರಭಾವವನ್ನು ಮರುಪರೀಕ್ಷೆಗೆ ಒಡ್ಡುವ ವಿನ್ಯಾಸವನ್ನು ಹೊಂದಿದೆ. ಕರ್ನಾಟಕದಲ್ಲಿ ಹೆಸರಿಗೆ ಮಾತ್ರ ಉಳಿದುಕೊಂಡಿರುವ, ತಪ್ಪು ಮಾಡುವ ಅಧಿಕಾರಿಗಳನ್ನು ಶಿಕ್ಷಿಸಲು ಹಲ್ಲಾಗಲೀ ಉಗುರಾಗಲೀ ಇಲ್ಲದಿರುವ, ಕಚ್ಚುವುದು ಹೋಗಲಿ ಬುಸುಗುಟ್ಟುವುದಕ್ಕೂ ಬಲವಿಲ್ಲದೆ ಮದ್ಯಪಾನ

ಸಂಯಮ ಮಂಡಳಿ ತನ್ನ ಬಹು ಮುಖ್ಯವಾದ ಕೆಲಸ ಎನ್ನುವಂತೆ ಅನೂಚಾನವಾಗಿ ಮಾಡುತ್ತ ಬಂದಿರುವುದು – ಬೆಂಗಳೂರಿನ ಕೆಲವು ಮುಖ್ಯ ವೃತ್ತಗಳಲ್ಲಿ ಗಾಂಧಿಯ ದು:ಖಪೂರಿತ ಮುಖಭಾವ ಇರುವ 'ಕುಡಿತ ಬೇಡ' ಎನ್ನುವ ದಪ್ಪಕ್ಷರಗಳ ಫಲಕ ಹಾಕಿರುವುದು, ಅದರ ಕೆಳಗೆ ಮದ್ಯಪಾನ ಮಾನವನ ಸರ್ವನಾಶಕ್ಕೆ ಹೇಗೆ ಕಾರಣವಾಗುತ್ತದೆ ಎನ್ನುವ ಪುಟ್ಟ ವಿವರಣೆಯೂ ಇರುತ್ತದೆ. ಅದು ಯಾರ ಮೇಲಾದರೂ ಎಷ್ಟು ಪರಿಣಾಮ ಮಾಡಿರಬಹುದು ಗೊತ್ತಿಲ್ಲ. ಅಂಥ ಫಲಕಗಳನ್ನು ವಿರೋಧಿಸುವುದು ನನ್ನ ಉದ್ದೇಶವಲ್ಲ, ಅದಕ್ಕಿಂತ ಮುಖ್ಯವಾಗಿ ಶಾಲೆ, ಕಾಲೇಜು, ಸಾರ್ವಜನಿಕ ಸ್ಥಳಗಳಲ್ಲಿ ಮದ್ಯಪಾನದ ದುಷ್ಪರಿಣಾಮಗಳನ್ನು ಕುರಿತ ಕಿರು ನಾಟಕಗಳನ್ನು, ಸಾಕ್ಷ್ಯ ಚಿತ್ರಗಳನ್ನು ಪ್ರದರ್ಶಿಸುವುದು ಹೆಚ್ಚು ಪ್ರಯೋಜನಕಾರಿ. ನನ್ನ ಅಭಿಪ್ರಾಯವನ್ನು ಪುಷ್ಟೀಕರಿಸುವಂತೆ 'ಆತ್ಮಸ್ಪರ್ಶಿ ಗಾಂಧಿ' ಇದೆ ಎನ್ನುವ ಕಾರಣದಿಂದಾಗಿಯೇ ವಿವರವಾದ ಪೀಠಿಕೆಯ ಮಾತುಗಳನ್ನು ಆಡಬೇಕಾಯಿತು.

ಲೇಖಕರ ಮಾತಿನಲ್ಲಿ ಅಮ್ಮಿ ಚಂದ್ರಕುಮಾರ್ ಹೇಳಿಕೊಂಡಿರುವಂತೆ, ಅವರ ನಾಲ್ಕನೇ ಕೃತಿಯಾಗಿರುವ "ಆತ್ಮಸ್ಪರ್ಶಿ ಗಾಂಧಿ" ಅತ್ಯಂತ ಭಯ, ಭಕ್ತಿ, ಶ್ರದ್ಧೆಯಿಂದ ಬರೆದಿರುವ ನಾಟಕ. ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಓದುತ್ತಿರುವ ವೇದಾಂತ, ಹರಿ ಮತ್ತು ಧರಣೀಶ ಎನ್ನುವ ಮಕ್ಕಳೇ ನಾಟಕದ ನಾಯಕರು. ಮೇಷ್ಟು ಉಮೇಶಪ್ಪನ ಬೋಧನಯಿಂದ ಪ್ರಭಾವಿತರಾದ ಈ ಹುಡುಗರು ಗಾಂಧೀಜಿಯ ಆದರ್ಶಗಳನ್ನು ಮೈಗೂಡಿಸಿಕೊಳ್ಳುತ್ತಾರೆ. ನಗುವಿನಹಳ್ಳಿಯ ಸಾಹುಕಾರ ಮೋಹನಪ್ಪ ಸಾಕಷ್ಟು ಹಣ ಖರ್ಚು ಮಾಡಿ, ಕ್ಷೇತ್ರದ ಶಾಸಕನ ಕೃಪಾಕಟಾಕ್ಷ ಮತ್ತು ಸಹಾಯದಿಂದ ಊರಿನಲ್ಲಿ ಒಂದು ಮದ್ಯದಂಗಡಿ ಪ್ರಾರಂಭಿಸುತ್ತಾನೆ. ಅಲ್ಲಿಯವರೆಗೆ ಕೃಷಿ ಮತ್ತಿತರ ಚಟುವಟಿಕೆಗಳಲ್ಲಿ, ಕಸುಬುಗಳಲ್ಲಿ ತೊಡಗಿ ಅಷ್ಟಿಷ್ಟು ಸಂಪಾದನೆ ಮಾಡಿ, ನೆಮ್ಮದಿಯಿಂದ ಇದ್ದ ಬಡವರು ಕುಡಿತದ ಚಟಕ್ಕೆ ಬಿದ್ದು ಸಂಸಾರಗಳು ನಾಶವಾಗುವ ಹಂತಕ್ಕೆ ತಲುಪುತ್ತವೆ. ಒಂದು ಕಡೆ ಮೇಷ್ಟು ಉಮೇಶಪ್ಪ ಊರಿನ ಮಹಿಳೆಯರ ಬೆಂಬಲದೊಂದಿಗೆ ಕಾನೂನಿನ ಪ್ರಕಾರ ಹೋರಾಟಕ್ಕಿಳಿದರೆ, ಮಕ್ಕಳು ಅವರ ವಯಸ್ಸಿಗೆ ಮೀರಿದ ಪ್ರಬುದ್ಧತೆಯನ್ನು, ಚಾಣಾಕ್ಷತೆಯನ್ನು, ದೂರದೃಷ್ಟಿಯನ್ನು ತೋರುವವರಂತೆ ಕಾನೂನಿನಿಂದ ಹಳ್ಳಿಯ ಬದುಕಿನಲ್ಲಿ ಮತ್ತೆ ನೆಮ್ಮದಿ ಕಾಣಿಸಿಕೊಳ್ಳುತ್ತದೆ ಎನ್ನುವದರಲ್ಲಿ ವಿಶ್ವಾಸ ಕಳೆದುಕೊಂಡು ಮದ್ಯದಂಗಡಿಗೆ ಮಧ್ಯರಾತ್ರಿಯಲ್ಲಿ ಬೆಂಕಿ ಹಚ್ಚುತ್ತಾರೆ. ಅಂಗಡಿ ಮಾಲೀಕ, ರೌಡಿಗಳ ಪೋಷಕ ಮೋಹನಪ್ಪ ಮಕ್ಕಳನ್ನು ಎಳೆತರಿಸಿ, ತೋಟದ ಮನೆಯಲ್ಲಿ ಕೂಡಿ ಹಾಕಿ, ಅಮಾನವೀಯವಾಗಿ ಚಾಟಿಯಿಂದ ಬಾರಿಸುತ್ತಾನೆ. ಮಕ್ಕಳು ಅಲ್ಲಿಂದ ಹೇಗೋ ಪಾರಾಗಿ ಬಂದು, ಮದ್ಯದಂಗಡಿ

ಪ್ರಾರಂಭದ ವಿರುದ್ಧ ಧಿಕ್ಕಾರ ಕೂಗುತ್ತ, ಅರಳೀಕಟ್ಟೆಯಲ್ಲಿ ಸತ್ಯಾಗ್ರಹ ನಡೆಸುತ್ತಾರೆ. ತಂದೆ ತಾಯಿಯರು ಪರಿಪರಿಯಾಗಿ ಪುಸಲಾಯಿಸಿದರೂ ಮಕ್ಕಳು ಅಲ್ಲಿಂದ ಕದಲುವುದಿಲ್ಲ. ಉಪವಾಸದಿಂದ ಬಳಲಿದರೂ ಸಂಕಲ್ಪದಿಂದ ಹಿಂದೆ ಸರಿಯುವುದಿಲ್ಲ. ಕೊನೆಗೆ ಮಕ್ಕಳು ನಗುವಿನಹಳ್ಳಿಯಲ್ಲಿ ಮದ್ಯದಂಗಡಿ ಲೈಸೆನ್ಸ್ ರದ್ದುಮಾಡಿ ಊರಿನ ನೆಮ್ಮದಿಯನ್ನು ಕಾಪಾಡಬೇಕೆಂದು ಸತ್ಯಾಗ್ರಹ ನಡೆಸುತ್ತಿರುವ ಸುದ್ದಿ ಮುಖ್ಯಮಂತ್ರಿಗಳಿಗೆ ತಲುಪುತ್ತದೆ. ಕುತೂಹಲ ಮತ್ತು ಆತಂಕಗಳಿಂದ ಅವರೇ ಖುದ್ದಾಗಿ ನಗುವಿನಹಳ್ಳಿಗೆ ಬಂದು ಪರಿಸ್ಥಿತಿಯನ್ನು ಅವಲೋಕಿಸುತ್ತಾರೆ. ಮದ್ಯದಂಗಡಿ ತೆರೆದಿದ್ದ ಮೋಹನಪ್ಪನಿಗೆ ಚೆನ್ನಾಗಿ ಉಗಿದು, ಅಂಗಡಿಯ ಲೈಸೆನ್ಸ್ ರದ್ದು ಮಾಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡುತ್ತಾರೆ. ಗಾಂಧೀಜಿಯವರ ತತ್ವ ಸಿದ್ಧಾಂತಗಳ ಬಗೆಗೆ, ಅಹಿಂಸಾ ಮಾರ್ಗದ ಹೋರಾಟದ ಬಗೆಗೆ ಮೆಚ್ಚಿಗೆ ವ್ಯಕ್ತಪಡಿಸುತ್ತಾರೆ. ಮಕ್ಕಳಲ್ಲಿ ಗಾಂಧಿ ವಿಚಾರಧಾರೆಗಳು ಮೊಳೆಯಲು ಪ್ರೇರಣೆ ನೀಡಿದ ಮೇಷ್ಟ್ರು ಉಮೇಶಪ್ಪನ ಬಗೆಗೆ ಒಳ್ಳೆಯ ಮಾತುಗಳನ್ನಾಡಿ ಶ್ಲಾಘಿಸುತ್ತಾರೆ. ಎಳೆಯ ವಯಸ್ಸಿನಲ್ಲೇ ಸಾಮಾಜಿಕ ಹೋರಾಟಗಾರರಾಗಿ ರೂಪುಗೊಂಡಿರುವ ಧರಣೇಶ, ವೇದಾಂತ ಮತ್ತು ಹರಿಯ ಹೆಸರುಗಳ ಕೊನೆಯಲ್ಲಿ ಗಾಂಧಿ ಇರಬೇಕಂದು ಹಾರೈಸಿ ಮುಖ್ಯಮಂತ್ರಿಗಳು ಹೊರಡುತ್ತಾರೆ. ನಗುವಿನಹಳ್ಳಿಯ ಮೂಲಕ ಇಡೀ ನಾಡಿನಲ್ಲಿ ಗಾಂಧಿ ಮಾರ್ಗದ ಅಹಿಂಸಾತ್ಮಕ ಹೋರಾಟದ ಜಾಗೃತಿಯನ್ನು ಮೂಡಿಸಿದ ಮಕ್ಕಳನ್ನು ಹೊಗಳಿ, "ನಿಮಗೆ ಪಾಠ ಮಾಡಿದ ನನ್ನ ಜೀವನ ಸಾರ್ಥಕವಾಯಿತು" ಎಂದು ಮೇಷ್ಟು ಹೇಳುವುದರೊಂದಿಗೆ ನಾಟಕ ಮುಕ್ತಾಯವಾಗುತ್ತದೆ.

ಕಲಾವಿದನಾಗಿ, ನಿರ್ದೇಶಕನಾಗಿ, ರಂಗಭೂಮಿಯೊಡನೆ ಅನೇಕ ವರ್ಷಗಳ ಒಡನಾಟವನ್ನು ಹೊಂದಿರುವ ಅಮ್ಮಿ ಚಂದ್ರಕುಮಾರ್ ಬರೆದಿರುವ ಮಹತ್ವಾಕಾಂಕ್ಷೆಯ "ಆತ್ಮಸ್ಪರ್ಶಿ ಗಾಂಧಿ'ಯ ರಂಗ ಪ್ರಯೋಗದ ಸಾಧ್ಯತೆ ಮತ್ತು ಅದು ಪಡೆಯಬಹುದಾದ ಯಶಸ್ಸನ್ನು ಕುರಿತು ನಾನು ವಿಶ್ಲೇಷಿಸಲು ಹೋಗದೆ, ನಾಟಕದ ಚೌಕಟ್ಟಿನಲ್ಲಿ ತಂದಿರುವ ಕೆಲವು ಮುಖ್ಯ ಸಂಗತಿಗಳ ಬಗೆಗೆ ಮಾತನಾಡಬೇಕಾದ ಅಗತ್ಯವಿದೆ. ಹಳ್ಳಿಯ ಸರ್ಕಾರಿ ಶಾಲೆಗಳಲ್ಲಿ ಓದುವ ಮಕ್ಕಳ ಭವಿಷ್ಯವನ್ನು ಅವರ ಓದಿನ ಆಸಕ್ತಿಯನ್ನು ಉತ್ತೇಜಿಸುವ ಮೂಲಕ ನಿರ್ಮಿಸಬೇಕಾದ ತಂದೆ ತಾಯಿಯರು ಅದರ ಬಗೆಗೆ ದಿವ್ಯ ನಿರ್ಲಕ್ಷ್ಯ ತಳೆದಿರುತ್ತಾರೆ ಇಲ್ಲವೇ ಅವರ ಕಲಿಕೆಯನ್ನು ನಿರುತ್ತೇಜಕಗೊಳಿಸುವಂತೆ ಮಾತನಾಡುತ್ತಿರುತ್ತಾರೆ. ಇಲ್ಲಿ ಧರಣೇಶ, ವೇದಾಂತ, ಹರಿ ಈ ಎಲ್ಲರ ಮನೆಯಲ್ಲೂ ಅಂಥದೇ ವಾತಾವರಣ ಇದೆ. ಅವರ ಪ್ರತಿಭಾ ಪ್ರಕಾಶನಕ್ಕೆ ಪೋಷಕವಾಗುವಂಥ ವಿಚಾರದ ಬೀಜಗಳನ್ನು ಬಿತ್ತುವ ಹೊಣೆಗಾರಿಕೆಯನ್ನು

ನಿರ್ವಹಿಸುವ ಅಪರೂಪದ ಮತ್ತು ಆದರ್ಶಪ್ರಾಯ ಮೇಷ್ಟ್ರಾಗಿ ಉಮೇಶಪ್ಪ ಕಂಡು ಬರುತ್ತಾರೆ. ಅವರು ಶಾಲೆಯಲ್ಲಿ ಪಾಠ ಹೇಳುವುದಕ್ಕೆ ಮಾತ್ರ ಸೀಮಿತವಾಗದೆ ಸಮಾಜದ ಸ್ವಾಸ್ಥ್ಯ ಕಾಪಾಡುವಲ್ಲೂ ಪ್ರಮುಖ ಪಾತ್ರ ವಹಿಸುತ್ತಾರೆ. ಸುಬ್ಬಯ್ಯ, ಜನಾರ್ಧನ, ಕಿಟ್ಟಿಯಂಥ ಬೆವರು ಸುರಿಸಿ ದುಡಿಯುತ್ತಾ ಸಂಸಾರದೊಂದಿಗೆ ನೆಮ್ಮದಿಯಾಗಿದ್ದವರು ಊರಿಗೆ ಮದ್ಯದಂಗಡಿ ಬರುತ್ತಿದ್ದಂತೆ ಕುಡಿಯುವ ಚಾಪಲ್ಯವನ್ನು ನಿಯಂತ್ರಿಸಿಕೊಳ್ಳಲಾಗದೆ ಹೆಂಡತಿ ಮಕ್ಕಳೊಂದಿಗೆ ಸುಳ್ಳು ಹೇಳುವ, ಮನೆಯ ವಸ್ತುಗಳನ್ನೇ ಕದಿಯುವ, ಮೋಸ ಮಾಡುವ, ಹೆಂಡತಿಯನ್ನು ದಂಡಿಸುವ ಮಟ್ಟಕ್ಕೆ ಇಳಿಯುತ್ತಾರೆ. ಸಂಸಾರವನ್ನು ಹಾಳು ಮಾಡುತ್ತ ತಾವೂ ನಾಶವಾಗುತ್ತಿದ್ದೇವೆ ಎನ್ನುವ ಆಲೋಚನೆಯೇ ಬರದಷ್ಟರ ಮಟ್ಟಿಗೆ ಮದ್ಯದ ಗುಲಾಮರಾಗಿ ಬಿಡುತ್ತಾರೆ. ಊರಿನಲ್ಲಿ ಮದ್ಯದಂಗಡಿ ತೆರೆಯಲು ಮನಸ್ಸು ಮಾಡುವ ಸಾಹುಕಾರ ಮೋಹನಪ್ಪನಂಥವರಿಗೆ ಯಾವ ನೈತಿಕತೆಯೂ ಇರಲು ಸಾಧ್ಯವಿಲ್ಲ. ಊರಿನ ಜನ ಹಾಳಾದರೆ ನನಗೇನಂತೆ, ನಾನು ಹಾಕಿದ ಬಂಡವಾಳಕ್ಕೆ ಸಾವಿರ ಪಟ್ಟು ದುಡಿಯಬೇಕು. ಕೋಟಿ ಕೋಟಿ ಸಂಪಾದನೆ ಮಾಡಬೇಕು ಎನ್ನುವವರು ಅದಕ್ಕಾಗಿ ಎಂಥೆಂಥ ಭ್ರಷ್ಟ ಮಾರ್ಗಗಳನ್ನು ಅನುಸರಿಸುತ್ತಾರೋ ಅದನ್ನೆಲ್ಲ ಅವರು ನಾಚಿಕೆ, ಹೇಸಿಗೆ ಇಲ್ಲದೆ ರಾಜಾರೋಷವಾಗಿ ಮಾಡುತ್ತಾನೆ. ಮಕ್ಕಳು ಮಧ್ಯರಾತ್ರಿಯಲ್ಲಿ ಮದ್ಯದಂಗಡಿಗೆ ಬೆಂಕಿ ಹಾಕುವುದು, ಅಲ್ಲಿಂದ ತಪ್ಪಿಸಿಕೊಂಡು ಕಾಡಿಗಿ ಹೋಗಿ ರಾತ್ರಿ ಕಳೆಯುವುದು, ಮೋಹನಪ್ಪನ ಆಳುಗಳ ಕೈಗೆ ಸಿಕ್ಕು ಹಾಕಿಕೊಂಡು ತೋಟದ ಮನೆಯಲ್ಲಿ ಬಂಧಿಗಳಾಗುವುದು, ರೌಡಿಗಳು ಕುಡಿತ ಅಮಲಿನಲ್ಲಿದ್ದಾಗ ತಪ್ಪಿಸಿಕೊಳ್ಳುವುದು, ನಗುವಿನಹಳ್ಳಿಯಲ್ಲಿ ಮದ್ಯದಂಗಡಿ ವಿರುದ್ಧ ಮಕ್ಕಳು ಸತ್ಯಾಗ್ರಹ ಮಾಡುತ್ತಿದ್ದಾರೆನ್ನುವ ಸುದ್ದಿ ದೃಶ್ಯ ಮಾಧ್ಯಮಗಳಲ್ಲಿ ಬಿತ್ತರಗೊಂಡಾಗ ಅಲ್ಲಿಗೇ ಮುಖ್ಯಮಂತ್ರಿಯೇ ಧಾವಿಸಿ ಬರುವುದು ಈ ದೃಶ್ಯಗಳು ಸಿನೀಮಿಯವಾಗಿ ಕಂಡರೂ ಅದು ನಡೆಯಬೇಕಾದ ದಿಕ್ಕನ್ನು ಸೂಚಿಸುವಂತಿರುವ ನಾಟಕಕಾರರ ಆಶಯ ಸ್ವಾಗತಾರ್ಹವಾದದ್ದು. ಗಾಂಧಿ ಮತ್ತು ಗಾಂಧಿಯ ತತ್ವಾದರ್ಶಗಳ ಬಗೆಗೆ ಇರುವ ಪ್ರೀತಿ, ಗೌರವವನ್ನು ಒಂದು ಒಳ್ಳೆಯ ನಾಟಕದ ಮೂಲಕ ಅಭಿವ್ಯಕ್ತಿಸಿ, ಗಾಂಧಿ ಚಿಂತನೆಗಳು ಇವತ್ತಿಗೂ ಜೀವಂತ ಎಂದು ಸಾಧಿಸಿ ತೋರಿಸಲು ಪ್ರಯತ್ನಿಸಿರುವ ಅಮ್ಮಿ ಚಂದ್ರಕುಮಾರನನ್ನು ಅಭಿನಂದಿಸುತ್ತೇನೆ. 'ಆತ್ಮಸ್ಪರ್ಶಿ ಗಾಂಧಿ' ಓದುವ ನಾಟಕವಾಗಿಯೂ ರಂಗಭೂಮಿಯಲ್ಲಿ ಪ್ರದರ್ಶಿಸುವ ನಾಟಕವಾಗಿಯೂ ಯಶಸ್ಸು ಪಡೆಯಲೆಂದು ಹಾರೈಸುತ್ತೇನೆ.

– ಡಾ. ಬೈರಮಂಗಲ ರಾಮೇಗೌಡ

ಅಧ್ಯಕ್ಷರು, ಬಿಎಂಶ್ರೀ ಪ್ರತಿಷ್ಠಾನ

ನಲ್ನುಡಿ

ಆತ್ಮದ ಘನತೆಯ ಸಾಧಕ ಗಾಂಧಿ

ಅಮ್ಮಿ ಎ.ಸಿ. ಚಂದ್ರಕುಮಾರ್ ಅವರು ಬರೆದಿರುವ 'ಆತ್ಮಸ್ಪರ್ಶಿ ಗಾಂಧಿ' ಎನ್ನುವ ನಾಟಕದ ಕೃತಿಯನ್ನು ಓದಿದೆ. ತಮ್ಮ ಸ್ವಾನುಭವದಲ್ಲಿ ಸಾಂದರ್ಭಿಕ ಪಾತ್ರಗಳ ಮೂಲಕ ಗಾಂಧೀಜಿಯವರ ತಾತ್ವಿಕತೆಯನ್ನು ಕಟ್ಟಿಕೊಡುವಲ್ಲಿ ಇವರು ಯಶಸ್ವಿಯಾಗಿದ್ದಾರೆ. ಗಾಂಧೀ ಎಂಬುದು ಒಂದು ವ್ಯಕ್ತಿ ಅಲ್ಲ. ಅದು ಒಂದು ವ್ಯಕ್ತಿತ್ವ. ದೈಹಿಕವಾಗಿ ನಮ್ಮೊಂದಿಗೆ ಅವರು ಇಲ್ಲದಿರಬಹುದು. ಆದರೆ ಗಾಂಧಿ ಎಲ್ಲರ ಎದೆಯೊಳಗೆ ಅಂತರಂಗದ ಜೀವಸೆಲೆಯಾಗಿ ಉಳಿದಿದ್ದಾರೆ. ಗಾಂಧಿ ಎನ್ನುವ ಹೆಸರಿನಲ್ಲಿ ಆತ್ಮದ ಘನತೆಯ ಘನ ತತ್ವವನ್ನು ನಾವು ಕಾಣಬಹುದಾಗಿದೆ. ಈ ಜಗತ್ತು ತನ್ನೊಳಗೆ ಒಳಿತು ಕೆಡಕುಗಳೆಂಬುವ ಎಲ್ಲವನ್ನು ತುಂಬಿಟ್ಟುಕೊಂಡಿದೆ. ನಾವು ಮಾಡುವ ಕೆಲಸಗಳಿಗೆ ಸಾಕ್ಷಿಯನ್ನು ಸೃಷ್ಟಿ ಮಾಡಿಕೊಳ್ಳುತ್ತೇವೆ ಅದು ಪ್ರಚಾರದ ಉದ್ದೇಶವೂ ಇರಬಹುದು ಮತ್ತು 'ನಾನು' ಎನ್ನುವ ಅಹಂ ರಕ್ಷಣೆಯ ತಂತ್ರವೂ ಇರಬಹುದು. ಅದು ಏನೇ ಇದ್ದರು ನಾವು ನಮ್ಮ ಈ ಅಹಮಿಕೆಯ ಉಳಿವಿಗಾಗಿ ಜಗತ್ತಿಗೆ ಮುಖವಾಡಗಳ ಪ್ರದರ್ಶನ ಮಾಡುತ್ತೇವೆ. ಸುಳ್ಳು, ಮೋಸ, ತಂತ್ರಗಾರಿಕೆ, ಹೀಗೆ ಘಾತಕ ಕೃತ್ಯಗಳಲ್ಲಿ ನಿತ್ಯವೂ ಮನಸ್ಸು ಕೊಟ್ಟಿರುತ್ತೇವೆ. ಆದರೆ ಇದನ್ನು ಗಮನಿಸಿದ ಕವಿ ಹೃದಯ ಕೊಟ್ಟ ಆತ್ಮನಿವೇದನೆಯ ಮಾರ್ಗ ಎಂತಹದ್ದು ನೋಡಿ.

ಮುಚ್ಚುಮರೆಯಿಲ್ಲದೆಯೆ ಬಿಚ್ಚಿಡುವೆ ನಿನ್ನೆದುರು
ಒಪ್ಪಿಸಿಕೊ ಓ ಗುರುವೆ ಅಂತರಾತ್ಮ
ಪಾಪವಿದೆ ಪುಣ್ಯವಿದೆ ನರಕವಿದೆ ನಾಕವಿದೆ
ಒಪ್ಪಿಸಿಕೊ ಓ ಗುರುವೆ ಅಂತರಾತ್ಮ

– ಕುವೆಂಪು

ರಾಷ್ಟ್ರಕವಿ ಕುವೆಂಪು ಅವರ ಮಾತಿನಲ್ಲಿ ಇರುವ ಆಂತರ್ಯವನ್ನು ಗಮನಿಸಿದಾಗ ನಾವು ನಮ್ಮ ಕಾರ್ಯಸಾಧನೆಗಾಗಿ ಯಾರಿಗೆ ಬೇಕಾದರೂ ಸುಳ್ಳು ಹೇಳಬಹುದು ಆದರೆ ನಮ್ಮ ಅಂತರಂಗಕ್ಕೆ ಎಳ್ಳಷ್ಟೂ ದ್ರೋಹ ಮಾಡಲು ಸಾಧ್ಯವಿಲ್ಲ ಎನ್ನುವ ಮಾತು ಅವರ ಈ ಕಾವ್ಯದಲ್ಲಿ ವ್ಯಕ್ತಗೊಂಡಿದೆ. ಇಂತಹ ಆತ್ಮನಿವೇದನೆಯು ಸರಳತೆಯಿಂದ ಬರುತ್ತದೆ. ಸರಳತೆಯು ಮಕ್ಕಳಿಂದ ಕಲಿಯಬೇಕಾದ ಪಾಠ. ವ್ಯಕ್ತಿ ದೈಹಿಕವಾಗಿ ಎಷ್ಟೇ ಬೆಳೆದರೂ ಅವನ ವ್ಯಕ್ತಿತ್ವದಲ್ಲಿ ಮಗುವಿನ ಮುಗ್ಧತೆಯನ್ನು ಉಳಿಸಿಕೊಂಡಿರಬೇಕು. ಗಾಂಧೀಜಿಯವರಲ್ಲಿ ಆ ಮಗುವಿನ ಮುಗ್ಧತೆ ಸದಾ ಎಚ್ಚರವಾಗಿರುತ್ತಿತ್ತು. ತಮಗೆಲ್ಲರಿಗೂ ತಿಳಿದಿರುವ ಹಾಗೆ ಅವರ ಬಾಲ್ಯದ ಘಟನೆಗಳು ಅವರನ್ನು ಮೋಹನದಾಸನಿಂದ ಮಹಾತ್ಮ ಗಾಂಧೀಜಿಯಾಗಲು ಪ್ರೇರೇಪಿಸಿದವು. ಸುಳ್ಳು ಹೇಳಬಾರದು, ಸತ್ಯದ ಪರಿಪಾಲನೆ ಕಠಿಣ ಹಾದಿಯೇ ಆದರೂ ಸತ್ಯದ ಮಾರ್ಗದಲ್ಲಿ ಸುಖವಿದೆ ಎನ್ನುವುದನ್ನು 'ಸತ್ಯಹರಿಶ್ಚಂದ್ರ' ನಾಟಕವನ್ನು ನೋಡಿ ತಮ್ಮನ್ನು ತಾವು ಸತ್ಯದ ಪರಿಪಾಲನೆಯಲ್ಲಿ ತೊಡಗಿಸಿಕೊಂಡರು. 'ಶ್ರವಣಕುಮಾರನ ಕಥೆ' ಹೀಗೆ ತಮ್ಮ ಬಾಲ್ಯದಲ್ಲಿ ಪ್ರಭಾವ ಬೀರಿದ ಎಲ್ಲಾ ವಿಚಾರಗಳನ್ನು ಅವರು 'ನನ್ನ ಸತ್ಯಾನ್ವೇಷಣೆ'ಯಲ್ಲಿ ತೆರೆದಿಟ್ಟಿದ್ದಾರೆ. ಗಾಂಧೀಜಿಯವರಿಗೆ ಮಕ್ಕಳು ಎಂದರೆ ಹೆಚ್ಚು ಪ್ರೀತಿ, ಜೊತೆಗೆ ಇಂದಿನ ಮಕ್ಕಳೆ ನಾಳಿನ ಭವಿಷ್ಯ ಎಂದು ನಂಬಿದ್ದರು ಮತ್ತು ಮಕ್ಕಳಿಗೆ ಬಾಲ್ಯದಲ್ಲಿಯೇ ಶಿಸ್ತನ್ನು ಕಲಿಸಬೇಕು ಮತ್ತು ಉದಾತ್ತ ಧ್ಯೇಯ, ಆದರ್ಶಗಳನ್ನು ಬಿತ್ತಬೇಕು ಎಂದು ಭಾವಿಸಿದ್ದಲ್ಲದೆ ಕಾರ್ಯದಲ್ಲಿ ತರುತ್ತಿದ್ದರು. ಒಮ್ಮೆ ಗಾಂಧೀಜಿಯವರು ಮಾಡೆಲ್ ಸ್ಕೂಲ್‌ಗೆ ಭೇಟಿ ಕೊಟ್ಟಿದ್ದರು ಆಗ ಶಿಕ್ಷಕರಿಗೆ ಹೀಗೆ ಹೇಳಿದ್ದರು "ನೀವು ನಿಮ್ಮ ಶಾಲೆಯನ್ನು ಮಾದರಿ ಶಾಲೆಯನ್ನಾಗಿ ಮಾಡಬೇಕೆಂದರೆ ಮಕ್ಕಳಿಗೆ ಕೇವಲ ಅಕ್ಷರಾಭ್ಯಾಸ ಮಾಡಿಸಿದರೆ ಸಾಕಾಗುವುದಿಲ್ಲ ಜೊತೆಗೆ ಅವರನ್ನು ಅಡುಗೆ

ಮಾಡುವವರನ್ನು ಕಸಗುಡಿಸುವವರನ್ನಾಗಿಯೂ ಮಾಡಬೇಕು" ವಿದ್ಯಾರ್ಥಿಗಳಿಗೆ ಅವರ ಉಪದೇಶ ಹೀಗಿತ್ತು "ನೀವೇ ಸ್ವತ: ಕಸ ಗುಡಿಸುವವರಾದರೆ ನಿಮ್ಮ ಸುತ್ತ ಮುತ್ತಲ ಪರಿಸರವನ್ನು ಸ್ವಚ್ಛವಾಗಿಡಬಹುದು ವಿಕ್ಟೋರಿಯಾ ಕ್ರಾಸ್ ಗೆಲ್ಲುವುದಕ್ಕಿಂತ ಹೆಚ್ಚು ಧೈರ್ಯ ಒಬ್ಬ ಪರಿಣಿತ ಕಸಗುಡಿಸುವವನಿಗೆ ಬೇಕು" ಹೀಗೆ ಮಕ್ಕಳಲ್ಲಿ ಭವಿಷ್ಯದ ಭಾರತಕ್ಕೆ ಬೇಕಾದ ಆದರ್ಶದ ಗಿಡಗಳನ್ನು ನೆಡುವ ಮಾರ್ಗವನ್ನು ಮಕ್ಕಳು ಮಾತ್ರವಲ್ಲದೆ ಶಿಕ್ಷಕರಿಗೂ ಮಾರ್ಗದರ್ಶನ ಮಾಡುತ್ತಿದ್ದರು.

'ಆತ್ಮಸ್ಪರ್ಶಿ ಗಾಂಧಿ' ಈ ನಾಟಕ ಕೃತಿಯೂ ಸಹ ಶಾಲೆಯ ಶಿಕ್ಷಣ, ಶಿಕ್ಷಕರಿಂದ ಕಲಿತ ಪಾಠಗಳನ್ನು ಆ ಮಕ್ಕಳು ಮನೆಯು ತಮ್ಮ ಸಮಸ್ಯೆಗಳನ್ನು ಹೋಗಲಾಡಿಸಲು ಬಳಸುವ ರೀತಿ ಇದೆಯಲ್ಲಾ ಅಲ್ಲಿ ಮತ್ತೊಮ್ಮೆ ಗಾಂಧೀಜಿಯವರ ಆತ್ಮದ ಘನತೆಯನ್ನು ಎತ್ತರಿಸುವ ಕೆಲಸ ಸಾಗುತ್ತದೆ. ತಮ್ಮ ಊರಿನಲ್ಲಿ ಆಗುತ್ತಿರುವ ದೌರ್ಜನ್ಯಗಳನ್ನು ಅನ್ಯಾಯಗಳನ್ನು ಸಹಿಸದ ಮಕ್ಕಳೊಳಗೆ ಗಾಂಧಿ ತತ್ವ ಉಂಟು ಮಾಡುವ ಸಂಚಲನದ ಪರಿಣಾಮ ಮಕ್ಕಳು ಹೋರಾಟಗಾರರಾಗಿ ರೂಪುಗೊಳ್ಳುತ್ತಾರೆ. ಕೊನೆಗೆ ರಾಜ್ಯದ ಮುಖ್ಯಮಂತ್ರಿಯೇ ಬಂದು ಅವರ ಸಮಸ್ಯೆಗಳಿಗೆ ಸ್ಪಂದಿಸುವಷ್ಟು ಆತ್ಮಬಲದ ಹೋರಾಟವನ್ನು ಮಕ್ಕಳು ಕೈಗೊಳ್ಳುತ್ತಾರೆ. ಹೀಗೆ ಗಾಂಧಿ ಆಧುನಿಕ ಕಾಲದ ಸಮಸ್ಯೆಗಳ ಪರಿಹಾರಕ್ಕೆ, ಆತ್ಮೋದ್ಧಾರಕ್ಕೆ ಸದಾ ಒಂದು ತತ್ವದಂತೆ ನಮ್ಮೆಲ್ಲರೊಳಗೆ ಸದಾ ಅರಳುತ್ತಲೇ ಇರುತ್ತಾರೆ. ಅಮ್ಮಿ ಎ.ಸಿ. ಚಂದ್ರಕುಮಾರ್ ಅವರಿಗೆ ಶುಭವಾಗಲಿ ಗಾಂಧಿ ತತ್ವದ ಇಂತಹ ಮತ್ತಷ್ಟು ಕೃತಿಗಳು ಅವರಿಂದ ಹೊರಹೊಮ್ಮಲಿ ಎಂದು ಆಶಿಸುತ್ತೇನೆ.

– ನಾಡೋಜ ಡಾ. ವೂಡೇ ಪಿ.ಕೃಷ್ಣ,

ಅಧ್ಯಕ್ಷರು, ಕರ್ನಾಟಕ ಗಾಂಧೀ ಸ್ಮಾರಕ ನಿಧಿ,

ಬೆಂಗಳೂರು.

ನಾ ಕಂಡಂತೆ

ರಾಷ್ಟ್ರಪಿತ ಮಹಾತ್ಮ ಗಾಂಧೀಜಿ ಅಂದಿಗೂ, ಇಂದಿಗೂ, ಎಂದೆಂದಿಗೂ ಪ್ರಸ್ತುತ ಎನ್ನುವುದು ಸಾವಿರಾರು ರೂಪದಲ್ಲಿ ಸಾಬೀತಾಗಿ ಹೋಗಿದೆ.

ಸತ್ಯದ ಮಾರ್ಗ, ಕುಡಿತದಿಂದ ಕುಟುಂಬ ನಾಶ, ಹಳ್ಳಿಗಳಿಂದಲೇ ದೇಶ ಉದ್ಧಾರ, ಲಿಂಗಭೇದ, ಜಾತಿಭೇದ ಸಲ್ಲ, ಸರ್ವರೂ ಸಮಾನ ಎನ್ನುವ ತತ್ವಗಳು.. ಹೀಗೆ ಅನೇಕ ಅಭಿವೃದ್ಧಿ ಸೂತ್ರಗಳ ಮೂಲಕ ಮುಂದಿನ ರಾಮರಾಜ್ಯದ ಕನಸಿನ ಸಾಕಾರದ ದಾರಿಗಳನ್ನು ಅವರು ಹೇಳಿ ಹೋಗಿದ್ದಾರೆ. ಇದನ್ನಾಧರಿಸಿ ಪ್ರಕಟವಾಗಿರುವ ಸಾಹಿತ್ಯಗಳು, ನಾಟಕಗಳು, ಕೃತಿಗಳು, ಭಾಷಣಗಳು, ಲೇಖನಗಳು ಲೆಕ್ಕವೇ ಇಲ್ಲ. ಹೀಗಾಗಿ ಗಾಂಧೀಜಿ ವಿಚಾರಧಾರೆ ಗಳನ್ನು ಆಧರಿಸಿದ ಅನೇಕ ಕೃತಿಗಳ ನಡುವೆ 'ಆತ್ಮಸ್ಪರ್ಶಿ ಗಾಂಧಿ' ಎಂಬ ನಾಟಕ ರಚನೆಯಾಗಿರುವುದು ನಿಜಕ್ಕೂ ವಿಶೇಷ. ಅದು ಇಂದಿನ ಅನಿವಾರ್ಯ ಕೂಡ ಎಂದೇ ಹೇಳಬೇಕು.

ಏಕೆಂದರೆ ಬದಲಾದ ಸನ್ನಿವೇಶ, ಸಾಮಾಜಿಕ ಸವಾಲುಗಳು ಮತ್ತು ಬೆಳೆಯುತ್ತಿರುವ ವಿಚಿತ್ರ ಹಾಗೂ ವಿಶೇಷ ಮಾಧ್ಯಮಗಳು ಗಾಂಧೀಜಿಯ ವಿಚಾರಧಾರೆ ಮತ್ತು ತತ್ವಗಳನ್ನು ಎಲ್ಲಿಯಾದರೂ ಮೂಲೆಗೆ ಸೇರಿಸಿಬಿಡುತ್ತವೋ ಎನ್ನುವ ಆತಂಕ ಇದೆ. ಇಂಥಹ ದಿಗಿಲು ನಮ್ಮ ನಡುವೆಯೇ ಇರುವುದನ್ನು ನಾವು ಒಪ್ಪಿಕೊಳ್ಳಲೇಬೇಕು.

ಇಂತಹ ಸ್ಥಿತ್ಯಂತರ ಕಾಲದಲ್ಲಿ ನೂರು ವರ್ಷಗಳ ಹಿಂದಿನ ಗಾಂಧೀಜಿಯವರ ಹೋರಾಟ ಮತ್ತು ವಿಚಾರಧಾರೆಗಳನ್ನು ನೆನಪಿಸಿ ಅದೇ ತೆರನಾದ ಚಳುವಳಿಗಳು ಅಗತ್ಯವನ್ನು ಒತ್ತಿ ಹೇಳಿವ ನಿಟ್ಟಿನಲ್ಲಿ 'ಆತ್ಮ ಸ್ಪರ್ಶಿ ಗಾಂಧಿ' ನಾಟಕ ಯಶಸ್ವಿಯಾಗುವ ವಿಶ್ವಾಸವನ್ನು ಮೂಡಿಸಿ ಅಚ್ಚರಿ ತಂದಿದೆ.

ನಾಟಕದಲ್ಲಿ ಕಂಡುಬರುವ ನಗುವಿನ ಹಳ್ಳಿ ದುಃಖ ಮಡುಗಟ್ಟಿದ್ದು ನಂತರ ಗಾಂಧಿ ವಿಚಾರಧಾರೆ ವಿಜಯಸಾಧಿಸಿ ನಗುವನ್ನು ಉಕ್ಕುವಂತೆ ಮಾಡಿದ್ದು ನಾಟಕದ ಹಂದರ. ಅಂದರೆ ಹಳ್ಳಿಯಲ್ಲಿ ಯಜಮಾನನೊಬ್ಬ ಸಾರಾಯಿ ಅಂಗಡಿ ಆರಂಭಿಸಿ ಇಡೀ ಹಳ್ಳಿಯನ್ನೇ ವಿನಾಶದ ಕಡೆಗೆ ಕೊಂಡೊಯ್ಯುತ್ತಿರುವುದು, ಅದರ ವಿರುದ್ಧ ಐದು ಮಂದಿ ಮಕ್ಕಳು ಹೋರಾಡಿ ಗೆಲ್ಲುವುದು ನಾಟಕದ ಒಟ್ಟಾರೆ ವಿಚಾರ.

ನಾಟಕದಲ್ಲಿ ವೇದಾಂತ, ಹರಿ ಮತ್ತು ಧರಣೇಶ್ ಸೇರಿದಂತೆ ಐವರು ಮಕ್ಕಳು ಗಾಂಧೀಜಿಯ ತತ್ವಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಗ್ರಾಮವನ್ನು ಸುಧಾರಣೆಗೆ ಹೋರಾಟ ನಡೆಸುವುದು ನಿಜಕ್ಕೂ ಇಂದಿನ ಸಮಾಜದ ಅಗತ್ಯವನ್ನು ಎತ್ತಿ ಹಿಡಿಯುತ್ತದೆ. ನಾಟಕದಲ್ಲಿ ಸ್ವಾತಂತ್ರ್ಯ ಸೇನಾನಿಯ ಪುತ್ರ ಮೇಷ್ಟ್ರು ಉಮೇಶಪ್ಪ ಗಾಂಧೀಜಿ ತಪ್ಪು ಸಿದ್ಧಾಂತದ ಪ್ರತಿಕವಾಗಿ ಕಾಣಿಸಿಕೊಳ್ಳುತ್ತಾರೆ.

ಮಕ್ಕಳ ಪೋಷಕರಾದ ಕಿಟ್ಟಿ ಸುಬ್ಬಯ್ಯ ಸಿಂಗ್ರಿ ನಾಗಯ್ಯ ಜನಾರ್ಧನ ಇವರು ಸಮಾಜಕ್ಕೆ ಅಂಟಿಕೊಂಡಿರುವ ದುಶ್ಚಟಗಳು ಸಂಕೇತವಾಗಿ ಕಾಣಿಸಿಕೊಳ್ಳುತ್ತಾರೆ. ಅಷ್ಟೇ ಅಲ್ಲ ಅವರು ಗ್ರಾಮೀಣ ಮುಗ್ಧಜನರ ಅಸಾಯಕತೆಯ ಸಂಕೇತವಾಗಿಯೂ ಬಿಂಬಿತವಾಗಿದ್ದಾರೆ. ಇಂಥ ಸನ್ನಿವೇಶದಲ್ಲಿ ದೇಶದ ಕಾನೂನುಗಳು ಅದನ್ನು ಕಾಪಾಡಬೇಕಾದ ಜನಪ್ರತಿನಿಧಿಗಳು ಹೇಗೆಲ್ಲ ಜಾಣ ಮೌನವಹಿಸುತ್ತಾರೆ ಎನ್ನುವುದನ್ನು ನಾಟಕದ ಕರ್ತೃ ಅಮ್ಮಿ ಎ.ಸಿ. ಚಂದ್ರಕುಮಾರ್ ಸ್ಪಷ್ಟವಾಗಿ ಹೇಳಿದ್ದಾರೆ.

ಚಂದ್ರ ಕುಮಾರ್ ಅವರು ಈ ನಾಟಕವನ್ನು ಯಾವ ಪ್ರೇರಣೆ ಮತ್ತು ಹಿನ್ನೆಲೆ ಆಧಾರದಲ್ಲಿ ರಚಿಸಿದ್ದಾರೆ ಎನ್ನುವುದು ಗೊತ್ತಿಲ್ಲ ಆದರೆ ಉತ್ತಮ ಲೇಖಕ, ಬರಹಗಾರ ಹೋರಾಟಗಾರ ಎಂದಷ್ಟೇ ಗುರುತಿಸಿಕೊಂಡಿದ್ದ ಚಂದ್ರಕುಮಾರ್ 'ಆತ್ಮ ಸ್ಪರ್ಶಿ ಗಾಂಧಿ' ಎಂಬ ನಾಟಕದ ಮೂಲಕ ಒಬ್ಬ ಉತ್ತಮ ನಾಟಕ ಕರ್ತೃ ಎನ್ನುವುದನ್ನು ತೋರಿಸಿಕೊಟ್ಟಿದ್ದಾರೆ. ಹೇಗೆಂದರೆ, ಸುಂದರ ಸ್ವಚ್ಛಂದ ಸ್ವರ್ಗದಂತಿದೆ ನಗುವಿನ ಹಳ್ಳಿಯಲ್ಲಿ ಕೇವಲ ಒಂದು ಸಾರಾಯಿ ಅಂಗಡಿ ಹೇಗೆಲ್ಲ ನೆಮ್ಮದಿಯನ್ನು ಹಾಳು ಮಾಡುತ್ತದೆ ಎನ್ನುವುದನ್ನು ಕಟುವಾಗಿ ಕಟ್ಟಿಕೊಡುತ್ತಾರೆ ಅಷ್ಟೇ ಅಲ್ಲ ಅಂಗಡಿ ದುಡಿದು ಜೀವನ ಮಾಡುತ್ತಿದ್ದವನು ಹೇಗೆ ಸಾಲದ ಶೂಲಕ್ಕೆ ಸಿಲುಕುತ್ತಾನೆ ಅದೇ ಸಾಲ ಅವನ ಕುಟುಂಬವನ್ನು ಹೇಗೆಲ್ಲ ಬೀದಿಗೆ ನೂಕುತ್ತದೆ ಎನ್ನುವುದನ್ನು ಚಂದ್ರಶೇಖರ್ ವಾಸ್ತವ ಸಂಗತಿಗಳ ಸಹಿತ ಹೆಣೆದಿದ್ದಾರೆ.



ನಾಟಕದಲ್ಲಿ ಬರುವ ಐವರು ಸಾಹಸ ಪ್ರವೃತ್ತಿಯ ಮಕ್ಕಳು ಸಾರಾಯಿ ಅಂಗಡಿಗೆ ಬೆಂಕಿ ಹಚ್ಚಿ ಕಾಡಿನಲ್ಲಿ ಅರಗಿಸಿಕೊಳ್ಳುವುದು ಮೇಲ್ನೋಟಕ್ಕೆ ಸಿನಿಮೀಯ ರೀತಿಯಲ್ಲಿ ಕಾಣುತ್ತದೆ ಆದರೆ ಅವರ ಕುಟುಂಬಗಳನ್ನು ಹೇಗೆ ಕಿತ್ತು ತಿನ್ನುತ್ತಿತ್ತು ಹಾಗೂ ಅವರ ಪೋಷಕರ ನಡುವೆ ಜಗಳ ತಂದೆಯನ್ನು ನಾಶಮಾಡಿತ್ತು ಎನ್ನುವ ಆಕ್ರೋಶದ ಸ್ಫೋಟವನ್ನು ಆ ದೃಶ್ಯಗಳು ಬಿತ್ತರಿಸುತ್ತದೆ. ಈ ನಾಟಕದಲ್ಲಿ ಮೇಷ್ಟ್ರು ಉಮೇಶಪ್ಪ ಎಲ್ಲಿಯೂ ಹೋರಾಟಕ್ಕೆ ಆಗಲಿ ಪ್ರತಿಭಟನೆಗಾಗಿ ಗುಡಿಸಲಿಗೆ ಬೆಂಕಿ ಹಚ್ಚುವುದಕ್ಕಾಗಿ ಬರುವುದಿಲ್ಲ ಬದಲಾಗಿ ಎಲ್ಲಾ ಕೆಲಸಗಳನ್ನು ಒಂದು ವಿಚಾರಧಾರೆ ಮೂಲಕ ನಡೆದು ಹೋಗುವಂತೆ ಮಾಡುತ್ತಾರೆ ಅಂದರೆ ಇಲ್ಲಿ ಉಮೇಶಪ್ಪ ವಧಿಸುವ ವಿಚಾರಧಾರೆಯ ಪಾತ್ರಧಾರಿಗಳೇ ಐವರು ಮಕ್ಕಳು. ಇವರ ಮೂಲಕ ಇಡಿ ಹಳ್ಳಿಯನ್ನು ಒಂದು ಮಾಡಿ ಸಾರಾಯಿ ಅಂಗಡಿ ನಾಶಮಾಡಿ ಇದನ್ನು ನೋಡಲು ಸರಕಾರದ ಗ್ರಾಮಕ್ಕೆ ಬರುವಂತೆ ಮಾಡುವ ಉಮೇಶಪ್ಪ ನಿಜಕ್ಕೂ ಗಾಂಧಿವಾದಿ ಎನ್ನುವುದು ಇಲ್ಲಿ ವೇದ್ಯವಾಗುತ್ತದೆ.

ಇದೆಲ್ಲಕ್ಕಿಂತ ಮುಖ್ಯವಾಗಿ ದಶಕಗಳ ಹಿಂದೆ ಕಾಣಬರುತ್ತಿದ್ದ ಸಾರಾಯಿ ಅಂಗಡಿಗಳನ್ನು ಈಗಿನ ಸನ್ನಿವೇಶಕ್ಕೆ ಅಳವಡಿಸಿ ನಾಟಕ ರಚಿಸಿರುವ ಚಂದ್ರಶೇಖರ್ ಉತ್ತಮ ಪತ್ರಕರ್ತ ಎನ್ನುವುದನ್ನು ಕೂಡ ಇದರಲ್ಲಿ ತೋರಿಸಿಕೊಟ್ಟಿದ್ದಾರೆ ಹೇಗೆಂದರೆ ಅಂಗಡಿಗೆ ಬೆಂಕಿ ಹಚ್ಚಿದ ಪ್ರಕರಣ ಗಾಂಧೀಜಿಯ ಉಪವಾಸ ಸತ್ಯಾಗ್ರಹ ಕಡೆಗೆ ತಿರುವು ಪಡೆದುಕೊಳ್ಳುತ್ತದೆ ಅಲ್ಲಿಗೆ ಈಗಿನ ಸನ್ನಿವೇಶದಲ್ಲಿ ಕಂಡುಬರುವ ಎಲ್ಲಾ ಮಾಧ್ಯಮಗಳು ಪತ್ರಕರ್ತರು ವಿವಿಧ ಮಾಧ್ಯಮ ಸಂಸ್ಥೆಗಳು ಬಂದು ವರದಿಗಳನ್ನು ಮಾಡಲಾರಂಭಿಸುತ್ತಾರೆ ಆ ಮೂಲಕ ಸರಕಾರದ ಗಮನ ಸೆಳೆಯುತ್ತಾರೆ ಪರಿಣಾಮ ಗ್ರಾಮಕ್ಕೆ ಐವರು ಮಕ್ಕಳು ಹಾಗೂ ಮಾಧ್ಯಮಗಳು ಸೇರಿ ಸಾರಾಯಿ ಅಂಗಡಿಯಿಂದ ಮುಕ್ತಿ ಕೊಡಿಸುತ್ತವೆ ಎನ್ನುವುದನ್ನು ಚಂದ್ರಕುಮಾರ್ ತೋರಿಸಿಕೊಟ್ಟಿದ್ದಾರೆ. ಹೀಗಾಗಿ ಗೆಳೆಯ ಚಂದ್ರ ಕುಮಾರ್ ನಮ್ಮ ನಡುವಿನ ಉತ್ತಮ ನಾಟಕ ಕರ್ತೃ. ಇದನ್ನು ರಂಗಕ್ಕೆ ಆಗಳಿಸಿದರೆ ಇದಕ್ಕೂ ಯಶಸ್ವಿ ಆಗುತ್ತದೆ ಎನ್ನುವ ಆಸೆಯ ಆಸೆ ನಿರೀಕ್ಷೆ ನನ್ನದಾಗಿ ಇರುತ್ತದೆ.

ಶಿವಕುಮಾರ್ ಬೆಳ್ಳಿತಟ್ಟೆ

ಹಿರಿಯ ಪತ್ರಕರ್ತರ



ಕೃತಜ್ಞತೆಗಳು

ಆತ್ಮಸ್ಪರ್ಶಿ "ಗಾಂಧಿ" ಅರ್ಥಗರ್ಭಿತ ಮುನ್ನುಡಿ ಹಾಗೂ ಮುಕ್ತ ಅಭಿಪ್ರಾಯಗಳನ್ನು ಬರೆದು ಹಾರೈಸಿದ ಲೇಖಕರು, ಚಿಂತಕರು, ವಿಮರ್ಶಕರು ಆದ ಡಾ. ಬೈರಮಂಗಲ ರಾಮೇಗೌಡರಿಗೆ ನನ್ನ ತುಂಬು ಹೃದಯದ ಕೃತಜ್ಞತಾ ಭಾವವನ್ನು ಅರ್ಪಿಸುತ್ತೇನೆ. ಗಾಂಧಿ ಭವನದ ಅಧ್ಯಕ್ಷರು, ಶೇಷಾದ್ರಿಪುರ ಶಿಕ್ಷಣ ದತ್ತಿ ಶಿಕ್ಷಣ ಶಿಲ್ಪಿಯಾದ 'ನಾಡೋಜ' ಡಾ. ವೂಡೇ ಪಿ. ಕೃಷ್ಣ ತಮ್ಮ ಅಕ್ಷರದ ಅಭಿಪ್ರಾಯವನ್ನು ಹಂಚಿಕೊಂಡಿದ್ದು ನನ್ನ ಇನ್ನೊಂದು ಹೆಮ್ಮೆಯ ಗರಿ ಎಂದು ಭಾವಿತ್ತೇನೆ. ನನ್ನ ಮೂರನೇ ಪುಸ್ತಕ ಬಿಡುಗಡೆಯ ಸಮಾರಂಭದಲ್ಲಿ ಮುಂದಿನ ಕೃತಿಯ ಬಗ್ಗೆ ಹೇಳಿದಾಗ ಈ "ಆತ್ಮಸ್ಪರ್ಶಿ ಗಾಂಧಿ" ಮುದ್ರಣಕ್ಕೆ ತಾನೆ ಸಹಾಯ ಮಾಡುತ್ತೇನೆಂದು ಮುಂದೆ ಬಂದ ಎಂ. ತಿಮ್ಮಯ್ಯನವರಿಗೆ, ರೇಷ್ಮೆನಾಡು ಶ್ರೀನಿವಾಸ್‌ರವರರಿಗೂ ಹಾಗೂ ವೈ.ಹೆಚ್.ಆನಂದ್‌ರವರಿಗೆ ನನ್ನ ಕೃತಜ್ಞತೆಗಳು. ಇವರು ಕನ್ನಡ ಪರಿಚಾರಕರು, ದೂರದರ್ಶಿತ್ವದ ವ್ಯಕ್ತಿತ್ವದ ಸಮಚಿತ್ತದ ಅಕ್ಷರಗಳನ್ನು ಬಿತ್ತುವ ಕನ್ನಡ ಕೃಷಿಕರುಗಳು ಅವರಿಗೂ ಸಹ ಕೃತಜ್ಞತೆ ಅರ್ಪಿಸುವೆ. ಪುಸ್ತಕದ ಮುಖಪುಟ ವಿನ್ಯಾಸ ಹಾಗೂ ಅಕ್ಷರ ಜೋಡಣೆ ಮಾಡಿದ ನನ್ನ ಆತ್ಮೀಯ ಗೆಳೆಯ ಸಿ.ಎನ್.ಕೆ. ಕ್ರಿಯೇಷನ್‌ನ ನಂದಕಿಶೋರ್ ಸಹ. ಇನ್ನು ನನ್ನ ಮಡದಿ ಪ್ರಕಾಶಕಳಾಗಿ ಈ ಪುಸ್ತಕ ಅರ್ಥಗರ್ಭಿತವಾಗಿ ಪ್ರಕಾಶಿಸುವಂತೆ ಸದಾ ಜೊತೆಯಲ್ಲಿಯೇ ಪ್ರೋತ್ಸಾಹಿಸುತ್ತಾ ಈ ನಾಲ್ಕನೆಯ ಪುಸ್ತಕಕ್ಕೂ ಅವಳೇ ಪ್ರಕಾಶಕಳಾಗಿ ಇರುವುದು ಹೆಮ್ಮೆಯ ವಿಚಾರವೇ ಸರಿ. ಇನ್ನು ಅಚ್ಚುಕಟ್ಟಾಗಿ ಮುದ್ರಿಸಿದ ಆಂಜನೇಯ ಪ್ರಿಂಟರ್ಸ್ ಮಾಲೀಕರಾದ ವೇಣುರವರಿಗೆ ಕೃತಜ್ಞತೆಯನ್ನು ಸಲ್ಲಿಸುತ್ತೇನೆ. ಇನ್ನು ನನ್ನ ಆತ್ಮೀಯ ಗೆಳೆಯರಾದ ಕನ್ನಡ ಕೃಷ್ಣ, ಗಿರೀಶ್ ಗೌಡ್ರು, ಡಾ. ಅರುಣ್‌ಕುಮಾರ್, ಚೇತನ್‌ರಾಜ್, ಅಭಿಮಾನಿ ಗೋಪಾಲ್, ಡಿಸೈನರ್ ಹೇಮಂತಕುಮಾರ್, ರಾಘವೇಂದ್ರಚಾರ್, ಎ.ಆಶಾ, ಪ್ರಭುರಾಜ್, ಕಿಶೋರ್ ಕುಮಾರ್, ವಾಚ್ ಶ್ರೀನಿವಾಸ್, ಊರುಕೆರೆ ಜಿ. ದಯಾನಂದ್ ಮತ್ತು ಸ್ನೇಹಿತರು, ದೊಡ್ಡಾಲಹಳ್ಳಿ ರಾಜೇಶ್, ಕಿಶೋರ್ (ಬೆಳ್ಳಿ), ಸಿ.ಎಂ.ಶಿವಕುಮಾರ್ ಪತ್ರಕರ್ತರು, ಇವರುಗಳಿಗೂ ಆತ್ಮೀಯವಾಗಿ ಕೃತಜ್ಞನಾಗಿರುತ್ತೇನೆ.

– ಅಮ್ಮಿ ಎ.ಸಿ.ಚಂದ್ರ ಕುಮಾರ್



ಲೇಖಕರ ಮಾತು

ಆತ್ಮೀಯ ಓದುಗರಿಗೆ,

"ಅಮ್ಮಿ" ಎಂಬುದು ನನ್ನ ಮನೆತನದ ಹೆಸರು. ಅದು ನನ್ನ ಕಾವ್ಯನಾಮವು ಹೌದು. ಬಾಲ್ಯದಲ್ಲಿ ವಿದ್ಯಾಭ್ಯಾಸದ ಜೊತೆಯಲ್ಲಿಯೇ ಅನೇಕಾನೇಕ ನಾಟಕಗಳಲ್ಲಿ ಮುಖ್ಯ ಪಾತ್ರಗಳನ್ನು ಮಾಡಿ, ತದನಂತರದ ದಿನಗಳಲ್ಲಿ ಪೌರಾಣಿಕ, ಐತಿಹಾಸಿಕ, ಸಾಮಾಜಿಕ ನಾಟಕಗಳನ್ನು ನಿರ್ದೇಶನ ಮಾಡಿದ್ದೂ ಉಂಟು. ಅದೇ ನಾಟಕಗಳಿಗೆ ಕೆಲವು ಸಾಹಿತ್ಯಗಳನ್ನು ರಚಿಸಿದ್ದು ಉಂಟು. ನನಗೆ ಓದು ಮತ್ತು ಬರವಣಿಗೆ ಬಾಲ್ಯದಲ್ಲಿಯೇ ರೂಢಿಯಾಗಿತ್ತು. ಅದನ್ನು ಯಾವ ದಿಕ್ಕಿನಲ್ಲಿ ಕೊಂಡೊಯ್ಯಬೇಕು ಎಂಬ ಅಂದಾಜು ನನಗಿರಲಿಲ್ಲ. ದಿನ ಉರುಳಿ ಮಾಸಗಳು ಕಳೆದು ವರ್ಷಗಳು ಉರುಳಿದಾಗ ಕೆಲವೊಂದು ಪತ್ರಿಕೆಗಳಿಗೆ ಸವಿಸ್ತಾರವಾದ ಲೇಖನಗಳನ್ನು ಬರೆಯುತ್ತಿದ್ದೆ, ಪತ್ರಕರ್ತನಾದೆ, 'ಅಮ್ಮಿ ನ್ಯೂಸ್' ಪತ್ರಿಕೆಗೆ ಸಂಪಾದಕನಾದೆ. ಅಗಾಧವಾದ ಆಲೋಚನೆ ಕನಸುಗಳು ಅಕ್ಷರಗಳ ರೂಪದಲ್ಲಿ ಅಂತಃಕರಣದ ಭಾವನೆಗಳನ್ನು ದು:ಖ ದುಮ್ಮಾನಗಳನ್ನು, ನೋವು ನಲಿವುಗಳನ್ನು, ಸ್ನೇಹ ಬಂಧುತ್ವ, ತಿರಸ್ಕಾರ ಭಾವಗಳನ್ನು ಎಲ್ಲವನ್ನು ಹಿತವಾಗಿಯೆ ಸ್ವೀಕರಿಸಿದೆ. ನಿಕೃಷ್ಠತೆಯ ನುಡಿಗಳು ಎಲ್ಲವುಗಳು ಆಯಾ ಕಾಲಕ್ಕೆ ತಕ್ಕಂತೆ ಬಂದು ಹೋದವು. ಈ ಬಂದು ಹೋಗುವ ನಡುವೆ ಸಮಾಜಕ್ಕೆ ಏನಾದರೂ ನನ್ನ ಹೆಸರು ಬಿಟ್ಟು ಹೋಗಬೇಕಲ್ಲವೇ? ಅದಕ್ಕಾಗಿಯೇ 'ವಚನ ಪಿತಾಮಹಾ ದಾಸಿಮಯ್ಯ' ಮೊದಲನೆಯ ಪುಸ್ತಕ. ಎರಡನೆಯ ಪುಸ್ತಕ 'ಹುಡುಗಿಯರ ಅದ್ಭುತ ಲೋಕ', ಮೂರನೆಯ ಪುಸ್ತಕ ಪ್ರದೂಷಣ, ಇನ್ನು ಈ ನಾಲ್ಕನೆಯದಾಗಿ "ಅತ್ಮಸ್ಪರ್ಶಿ ಗಾಂಧಿ" ಹೊರತರುತ್ತಿದ್ದೇನೆ. ನನ್ನಲ್ಲಿ ಇನ್ನೂ ಅನೇಕ ವಿಚಾರಗಳು ಪ್ರಶ್ನೆಯಾಗಿಯೇ ಉಳಿದಿವೆ. ಅವೆಲ್ಲವನ್ನು ಪುಸ್ತಕದ ರೂಪದಲ್ಲಿ



ಅತೀ ಶೀಘ್ರದಲ್ಲಿಯೇ ಹೊರತರುವ ಪ್ರಯತ್ನ ಮಾಡುತ್ತಲೇ ಇರುತ್ತೇನೆ. ನನಗೆ ಮುಪ್ಪಾದರೂ ಅಕ್ಷರದ ಕಲ್ಪನೆಗೆ ಮುಪ್ಪಿಲ್ಲ. ಹೊಸ ಹೊಸ ಆಲೋಚನೆಗಳು ನನ್ನ ಜೊತೆಯಲ್ಲಿಯೇ ಸಾಗುತ್ತಲಿರುತ್ತವೆ.

ಒಂದು ಅದ್ಭುತ ವಾಕ್ಯ ನೆನಪಿಗೆ ಬರುತ್ತದೆ. 'ಎರಡು ಕಾಲಿದ್ದವರೆಲ್ಲ ನಡೆಯಬಹುದು ಎರಡು ಕೈ ಇದ್ದವರೆಲ್ಲ ಬರೆಯಲಾರರು'. ಮೊದ ಮೊದಲು ಲೇಖನಗಳನ್ನು ಬರೆಯುತ್ತಿದ್ದಾಗ ನಕ್ಕಿದ್ದು ಉಂಟು. ಈಗ ಅವರೇ ನಿಬ್ಬೆರಗಾಗುತ್ತಿದ್ದಾರೆ. ಅವರ ನಗುವಿನ ಉತ್ತೇಜನಕ್ಕೆ ನನ್ನದೊಂದು ಸಲಾಂ... ಬರೀ ಸಾಹಿತಿಯಾಗದೆ, ಪತ್ರಕರ್ತನಾಗದೆ, ಒಬ್ಬ ಅಪ್ಪಟ ಕನ್ನಡ ಪರ ಹೋರಾಟಗಾರನಾಗಿ ನಾಡ ಸೇವೆಗೆ ತನ್ನನ್ನು ತಾನು ಅರ್ಪಿಸಿದ ವಾಟಾಳ್ ನಾಗರಾಜ್, ಸಾ.ರಾ.ಗೋವಿಂದು, ಶಿವರಾಮೇಗೌಡ್ರು, ಪ್ರವೀಣ್‌ಕುಮಾರ್ ಶೆಟ್ಟಿ, ಮಂಜುನಾಥ ದೇವ, ಗಿರೀಶ್‌ಗೌಡ, ರೈತ ಮುಖಂಡರಾದ ಕೋಡಿಹಳ್ಳಿ ಚಂದ್ರಶೇಖರ್ ಇನ್ನೂ ಹತ್ತು ಹಲವು ಸಂಘಟನೆಗಳ ದಿಗ್ಗಜರುಗಳೊಂದಿಗೆ ನಾಡು, ನುಡಿ, ಜಲ, ಗಡಿ, ಭಾಷೆಗೆ ಸರ್ಕಾರದ ನ್ಯೂನತೆಗಳ ವಿರುದ್ಧ ಗಟ್ಟಿ ಧ್ವನಿಯಲ್ಲಿ ಪ್ರತಿಭಟಿಸಿದ್ದು ಉಂಟು. ನೂರಾರು ಸಲ ಬಂಧನಕ್ಕೆ ಒಳಗಾಗಿದ್ದು ಉಂಟು. ಈ ಎಲ್ಲಾ ಆಯಾಮಗಳಿಂದ ಆತ್ಮತೃಪ್ತಿಯ ಆತ್ಮಬಲದ ಮನ ಹಸನ್ಮುಖಿಯಾಗಿದೆ...

***

ಈಗಾಗಲೇ ನನ್ನ ಮೂರು ಪುಸ್ತಕಗಳು ಲೋಕಾರ್ಪಣೆಯಾಗಿವೆ. ಇದು ನನ್ನ ನಾಲ್ಕನೇ ಪುಸ್ತಕ ಅತ್ಯಂತ ಶ್ರದ್ಧೆ ಭಯ, ಭಕ್ತಿಯಿಂದ ಬರೆದಂತಹ ಆತ್ಮಸ್ಪರ್ಶಿಯ ಗಾಂಧಿ. ಇದು ಒಬ್ಬ ನಾಟಕಕಾರನಾಗಿ, ನಿರ್ದೇಶಕನಾಗಿ ಅನುಭವವಿರುವ ಕಾರಣ ಯಾವ ಪಾತ್ರಗಳು ಚ್ಯುತಿ ಬಾರದಂತೆ ನೋಡಿಕೊಂಡಿದ್ದೇನೆ. ವೇದಾಂತ, ಹರಿ ಮತ್ತು ಧರಣೇಶ ನಾಯಕನ ಪಾತ್ರಗಳಾಗಿ ಹೊರಹೊಮ್ಮುತ್ತದೆ. ತನ್ನ ಗುರುಗಳ ಬೋಧನೆಯಿಂದ ಪ್ರಭಾವಿತರಾಗಿ ಗಾಂಧೀಜಿಯ ಆದರ್ಶಗಳನ್ನು ಮೈಗೂಡಿಸಿಕೊಂಡು ಧೃತಿಗೆಡದೆ ತನ್ನ ನಗುವಿನಹಳ್ಳಿಯಲ್ಲಿ ಪಾನನಿರೋಧದ ಸಂಘರ್ಷಕ್ಕೆ ನಾಂದಿ ಹಾಡುತ್ತಾರೆ. ಇದು ರಚನೆಯ ಸಾರಾಂಶ.

ಗಾಂಧಿ ಒಬ್ಬ ಸರ್ವಶ್ರೇಷ್ಠ ನಾಯಕ. ಇನ್ನು ಸಾವಿರ ವರ್ಷಗಳು ಉರುಳಿದರೂ ಗಾಂಧಿ ಹೆಸರು ಅಜರಾಮರ. ಒಬ್ಬ ನೆಲ್ಸನ್ ಮಂಡೆಲಾ ಒಬ್ಬ

ಗಾಂಧಿ ಮತ್ತೆ ಹುಟ್ಟಿ ಬರಲು ಸಾಧ್ಯವೇ ಇಲ್ಲ ಈ ಸೃಷ್ಟಿಯೊಳು ಜಗದೊಳು. ನಾವುಗಳು ಬಾಲ್ಯದಲ್ಲಿದ್ದಾಗ ಪುಣ್ಯಾತ್ಮ ಗಾಂಧೀಜೀ, ಧರ್ಮಯೋಗಿ ಬಾಪೂಜೀ ನಮಗೋಸ್ಕರ ತನ್ನ ಜೀವವ ತೊರೆದೆಂಬ ಹಾಡುಗಳನ್ನು ಹಾಡುತ್ತಿದ್ದೆವು. ಉಪವಾಸ ವ್ರತವ ಮಾಡಿ ಸಾಧನೆಯ ಕೀರ್ತಿ ಬೆಳಗಿ ಛಲವನ್ನು, ಒಲವನ್ನು ಸಾಧಿಸಿದ ಅಂತಹ ಪುಣ್ಯಾತ್ಮ ಗಾಂಧೀಜಿಯನ್ನು ಕೊಂದ ಗೋಡ್ಸೆ ಮನುಷ್ಯನೇ ಅಲ್ಲ. ಅದು ಬಲಪಂಥಿಯರ ವ್ಯವಸ್ಥಿತ ಸಂಚು ಎಂದು ಭಾವಿಸಬಹುದು. ಗೋಡ್ಸೆ ಗುಂಡಿಕ್ಕಿದ್ದು ಒಬ್ಬ ಗಾಂಧೀಜಿಗಲ್ಲ, ಭಾರತದ ತಾಯಿ ಗರ್ಭಕ್ಕೆ. ಗೋಡ್ಸೆಯನ್ನು ಪೂಜಿಸುವ ಆರಾಧಿಸುವ ಮನಸ್ಸುಗಳಿಗೆ ನನ್ನ ಧಿಕ್ಕಾರವಿರಲಿ!

ಗಾಂಧೀಜಿ ತತ್ವ, ಆದರ್ಶಗಳು, ಪ್ರಸ್ತುತ ಕಾಲಕ್ಕೂ ಜೀವಂತ. ಅವರೊಬ್ಬ "ವಿಶ್ವಮಾನವ" ಭಾರತೀಯ ಸ್ವಾತಂತ್ರ್ಯ ಚಳುವಳಿಯನ್ನು ಮುನ್ನಡೆಸುವ ಮೊದಲು ಮೋಹನದಾಸ ಕರಮಚಂದ ಗಾಂಧಿ ದಕ್ಷಿಣ ಆಫ್ರಿಕಾದಲ್ಲಿ ಅನ್ಯಾಯ ಮತ್ತು ವರ್ಣಬೇಧ ನೀತಿ ವಿರುದ್ಧ ಹೋರಾಡುತ್ತಿದ್ದರು. ಹತ್ತು ವರ್ಷಗಳಲ್ಲಿ ಗಾಂಧಿ ಅಲ್ಲಿ ಸತ್ಯಾಗ್ರಹದ ತತ್ವ ಶಾಸ್ತ್ರವನ್ನು ಪ್ರಚಾರ ಮಾಡಿದರು ಮತ್ತು ದೇಶವನ್ನು ಯಾವುದೇ ವರ್ಗ ಅಥವಾ ಜನಾಂಗೀಯ ತಾರತಮ್ಯ ಸಮಾಜದತ್ತ ಮುನ್ನಡೆಸಿದರು. ಗಾಂಧಿ 1893 ರಲ್ಲಿ ಎಸ್.ಎಸ್.ಸಪಾರಿ ಹಡಗಿನಲ್ಲಿ ಡರ್ಬಿನ್‌ಗೆ ಬಂದರು. ಯಾವುದೇ ಸಮಯದಲ್ಲಿ ಗಾಂಧಿ ದಕ್ಷಿಣ ಆಫ್ರಿಕಾದ ಭಾರತೀಯ ಸಮುದಾಯದ ನಾಯಕರಾದರು.

ದಕ್ಷಿಣ ಆಫ್ರಿಕಾದಲ್ಲಿನ ಅಹಿಂಸಾತ್ಮಕ ಚಳುವಳಿಯಲ್ಲಿ ಅವರ ಪಾಲ್ಗೊಳ್ಳುವಿಕೆ ಅಂತಹ ಪ್ರಭಾವವನ್ನು ಬೀರಿತು. ಈಗಲೂ ಸಹ ಅವರನ್ನು ಅಲ್ಲಿನ ಮೇರು ನಾಯಕನಾಗಿ ನೋಡಲಾಗುತ್ತದೆ. 1893 ರಿಂದ 1914 ರವರೆಗೆ ಗಾಂಧಿ ವಕೀಲನಾಗಿ ಮತ್ತು ಸಾರ್ವಜನಿಕ ಕಾರ್ಯಕರ್ತರಾಗಿ ಕೆಲಸ ಮಾಡಿದರೂ ನವದೆಹಲಿಯಲ್ಲಿ ನಡೆದ ಸಭೆಯಲ್ಲಿ ಗಾಂಧಿ ಅವರು ಭಾರತದಲ್ಲಿ ಜನಿಸಿದರೂ ದಕ್ಷಿಣ ಆಫ್ರಿಕಾದಲ್ಲಿ ದೊಡ್ಡ ಚಳುವಳಿಯ ನಾಯಕರಾಗಿ ಹೊರಹೊಮ್ಮಿದರು. ಹಾಗಾದರೆ ಅಲ್ಲಿ ಅವರು ಮಾಡಿದ ಕೆಲಸಗಳು ಯಾವುದು?

21 ವರ್ಷಗಳ ಕಾಲ ದಕ್ಷಿಣ ಆಫ್ರಿಕಾದಲ್ಲಿ ಚಳುವಳಿಯ ಅಗ್ರಪಂಥೀಯ ನಾಯಕರಾಗಿ ಧಣಿವರಿಯದೇ ಮಾಡಿದ ಮಹಾನ್ ಚೇತನ. ಇದಾದ ನಂತರ ಭಾರತಕ್ಕೆ ಬಂದು ಸ್ವಾತಂತ್ರ್ಯ ಸಂಗ್ರಾಮಕ್ಕೆ ಧುಮುಕಿದ್ದು ಗತಕಾಲದ ಇತಿಹಾಸ. ಇಂತಹ ಮಹಾನಾಯಕನನ್ನು ಪಡೆದ ಭಾರತೀಯರೇ

ಧನ್ಯರು. ಗಾಂಧಿ ನಿನ್ನನ್ನು ಸ್ಮರಿಸುವಂತೆ ಮಾಡಿದ್ದು ಈ ಜನ್ಮದ ಅಂತ:ಕರಣದ 'ಅರ್ಪಣೆ'.

ದಕ್ಷಿಣ ಆಫ್ರಿಕಾದಲ್ಲಿ ನಾಗರಿಕ ಹಕ್ಕುಗಳ ಕಾರ್ಯಕರ್ತ (1893–1914) ಏಪ್ರಿಲ್ 1893ರಲ್ಲಿ 23 ವರ್ಷದ ಗಾಂಧಿ ಅಬ್ದುಲ್ಲಾ ಅವರ ಸೋದರ ಸಂಬಂಧಿ ಪರ ವಕೀಲರಾಗಲು ದಕ್ಷಿಣ ಆಫ್ರಿಕಾಕ್ಕೆ ಪ್ರಯಾಣ ಬೆಳೆಸಿದರು. ಅವರು ದಕ್ಷಿಣ ಆಫ್ರಿಕಾದಲ್ಲಿ 21 ವರ್ಷಗಳನ್ನು ಕಳೆದರು. ಅಲ್ಲಿ ಅವರು ತಮ್ಮ ರಾಜಕೀಯ ದೃಷ್ಟಿಕೋನಗಳು, ನೀತಿಶಾಸ್ತ್ರ ಮತ್ತು ರಾಜಕೀಯವನ್ನು ಅಭಿವೃದ್ಧಿಪಡಿಸಿದರು.

<u>ದಕ್ಷಿಣ ಆಫ್ರಿಕಾದಲ್ಲಿ ಗಾಂಧಿ ಮಾಡಿದ 10 ವಿಷಯಗಳ ಪಟ್ಟಿ ಇಲ್ಲಿದೆ:</u>

1. ಅವನು ಪ್ರಿಟೋರಿಯಾಕ್ಕೆ ರೈಲಿನಲ್ಲಿ ಪ್ರಯಾಣಿಸುತ್ತಿದ್ದಾಗ, ಗಾಂಧಿಯನ್ನು ಪ್ರಥಮ ದರ್ಜೆ ಟಿಕೆಟ್ ಹೊತ್ತುಕೊಂಡು ಹೋಗುತ್ತಿದ್ದರೂ, ಅಧಿಕಾರಿಗಳು ರೈಲಿನಿಂದ ಹೊರಗೆ ಎಸೆಯಲ್ಪಟ್ಟರು. ಏಕೆಂದರೆ ಒಬ್ಬ ಭಾರತೀಯನು ತನ್ನೊಂದಿಗೆ ಜಾಗವನ್ನು ಹಂಚಿಕೊಳ್ಳುತ್ತಿದ್ದಾನೆ ಎಂದು ಬಿಳಿ ವ್ಯಕ್ತಿಯೊಬ್ಬರು ದೂರಿದರು.

2. ಪ್ರತಿಕ್ರಿಯೆಯಾಗಿ, ಗಾಂಧಿ 1894 ರಲ್ಲಿ ನಟಾಲ್ ಇಂಡಿಯನ್ ಕಾಂಗ್ರೆಸ್ ಅನ್ನು ರಚಿಸಿದರು. ಈ ಸಂಘಟನೆಯು ಬಿಳಿ ಆಫ್ರಿಕನ್ನರನ್ನು ಸ್ಥಳೀಯ ಆಫ್ರಿಕನ್ನರು ಮತ್ತು ಭಾರತೀಯರ ಕಡೆಗೆ ದಬ್ಬಾಳಿಕೆ ನಡೆಸುವ ವಿರುದ್ಧ ಅಹಿಂಸಾತ್ಮಕ ಪ್ರತಿಭಟನೆಗಳನ್ನು ನಡೆಸಿತು.

3. 1896ರಲ್ಲಿ, ಅವರು ಅಲ್ಪಾವಧಿಗೆ ಭಾರತಕ್ಕೆ ಬಂದರು ಮತ್ತು ದಕ್ಷಿಣ ಆಫ್ರಿಕಾದಲ್ಲಿ ಅವರೊಂದಿಗೆ ಸೇವೆ ಸಲ್ಲಿಸಲು 800 ಭಾರತೀಯರನ್ನು ಒಟ್ಟುಗೂಡಿಸಿದರು. ಅವರನ್ನು ಕೋಪಗೊಂಡ ಜನಸಮೂಹ ಸ್ವಾಗತಿಸಿತು ಮತ್ತು ದಾಳಿಯಲ್ಲಿ ಗಾಂಧಿ ಗಾಯಗೊಂಡರು.

4. 1899 ರಲ್ಲಿ ಬೋಯರ್ ಯುದ್ಧ ಪ್ರಾರಂಭವಾದಾಗ, ಗಾಂಧಿ ಸುಮಾರು 1,100 ಭಾರತೀಯರನ್ನು ಒಟ್ಟುಗೂಡಿಸಿದರು ಮತ್ತು ಬ್ರಿಟಿಷರಿಗಾಗಿ ಭಾರತೀಯ ಅಂಬ್ಯುಲೆನ್ಸ್ ಕಾರ್ಪ್ಸ್ ಅನ್ನು ಆಯೋಜಿಸಿದರು. ಆದರೆ ಭಾರತೀಯರ ಮೇಲೆ ಜನಾಂಗೀಯ ತಾರತಮ್ಯ ಮತ್ತು ಚಿತ್ರಹಿಂಸೆ ಮುಂದುವರೆಯಿತು.

5. ಇಂಗ್ಲೀಷ್ ಕಲಾವಿದ ಜಾನ್ ರಸ್ಕಿನ್ ಅವರ ಪುಸ್ತಕ ಅನ್ಟೊ ದಿಸ್ ಲಾಸ್ಟ್ ಗಾಂಧಿಗೆ ಸ್ಫೂರ್ತಿ ನೀಡಿತು ಮತ್ತು ಅವರು ಡರ್ಬನ್ ಬಳಿ ಫೀನಿಕ್ಸ್ ಫಾರ್ಮ್ ಅನ್ನು ಸ್ಥಾಪಿಸಿದರು. ಇಲ್ಲಿ ಗಾಂಧಿಯವರು ತಮ್ಮ ಕಾರ್ಯಕರ್ತರಿಗೆ ಅಹಿಂಸಾತ್ಮಕ ಸತ್ಯಾಗ್ರಹ ಅಥವಾ ಶಾಂತಿಯುತ ಸಂಯಮದ ಬಗ್ಗೆ ತರಬೇತಿ ನೀಡುತ್ತಿದ್ದರು. ಫೀನಿಕ್ಸ್ ಫಾರ್ಮ್ ಅನ್ನು ಸತ್ಯಾಗ್ರಹದ ಜನ್ಮಸ್ಥಳವೆಂದು ಪರಿಗಣಿಸಲಾಗಿದೆ. ಆದಾಗ್ಯೂ, ಇದು ದಕ್ಷಿಣ ಆಫ್ರಿಕಾದ ಗಾಂಧಿಯವರ ಎರಡನೇ ಶಿಬಿರದ ಟಾಲ್‌ಸ್ಟಾಯ್ ಫಾರ್ಮ್‌ನಲ್ಲಿತ್ತು. ಅಲ್ಲಿ ಸತ್ಯಾಗ್ರಹವನ್ನು ಪ್ರತಿಭಟನೆಯ ಅಸ್ತ್ರವಾಗಿ ರೂಪಿಸಲಾಯಿತು.

6. 1906ರ ಸೆಪ್ಟೆಂಬರ್‌ನಲ್ಲಿ ಗಾಂಧಿಯವರು ಸ್ಥಳೀಯ ಭಾರತೀಯರ ವಿರುದ್ಧ ರಚಿಸಲಾದ ಟ್ರಾನ್ಸ್‌ವಾಲ್ ಏಷಿಯಾಟಿಕ್ ಸುಗ್ರೀವಾಜ್ಞೆಯನ್ನು ವಿರೋಧಿಸಿ ಮೊದಲ ಸತ್ಯಾಗ್ರಹ ಅಭಿಯಾನವನ್ನು ಆಯೋಜಿಸಿದರು. 1907ರ ಜೂನ್‌ನಲ್ಲಿ ಅವರು ಕಪ್ಪು ಕಾಯ್ದೆಯ ವಿರುದ್ಧ ಸತ್ಯಾಗ್ರಹವನ್ನು ನಡೆಸಿದರು.

7. 1908ರಲ್ಲಿ ಅಹಿಂಸಾತ್ಮಕ ಚಳುವಳಿಗಳನ್ನು ಆಯೋಜಿಸಿದ್ದಕ್ಕಾಗಿ ಅವರಿಗೆ ಜೈಲು ಶಿಕ್ಷೆ ವಿಧಿಸಲಾಯಿತು. ಆದರೆ, ಬ್ರಿಟಿಷ್ ಕಾಮನ್ವೆಲ್ತ್ ರಾಜಕಾರಣಿ ಜನರಲ್ ಸ್ಮಟ್ಸ್ ಅವರ ಭೇಟಿಯ ನಂತರ ಅವರನ್ನು ಬಿಡುಗಡೆ ಮಾಡಲಾಯಿತು. ಆದರೆ, ಇದಕ್ಕಾಗಿ ಆತನ ಮೇಲೆ ಹಲ್ಲೆ ನಡೆಸಲಾಯಿತು ಮತ್ತು ಮತ್ತೆ ಜೈಲು ಶಿಕ್ಷೆ ವಿಧಿಸಲಾಯಿತು, ಇದರ ವಿರುದ್ಧ ಅವರು ಮತ್ತೆ ಸತ್ಯಾಗ್ರಹವನ್ನು ಆಯೋಜಿಸಿದರು.

8. 1909ರಲ್ಲಿ ಅವರಿಗೆ ವೋಕ್‌ಶರ್ಸ್ಟ್ ಮತ್ತು ಪ್ರಿಟೋರಿಯಾದಲ್ಲಿ ಮೂರು ತಿಂಗಳ ಜೈಲು ಶಿಕ್ಷೆ ವಿಧಿಸಲಾಯಿತು. ಬಿಡುಗಡೆಯಾದ ನಂತರ ಗಾಂಧಿ ಅಲ್ಲಿನ ಭಾರತೀಯ ಸಮುದಾಯದ ನೆರವು ಪಡೆಯಲು ಇಂಗ್ಲೆಂಡ್‌ಗೆ ಹೋದರು.

9. ಅವರು 1913 ರಲ್ಲಿ ಕ್ರೈಸ್ತೇತರ ವಿವಾಹಗಳನ್ನು ರದ್ದುಗೊಳಿಸುವ ವಿರುದ್ಧವೂ ಹೋರಾಡಿದರು.

10. ಭಾರತೀಯ ಅಪ್ರಾಪ್ತ ವಯಸ್ಕರು ಬಳಲುತ್ತಿರುವ ದಬ್ಬಾಳಿಕೆಯ ವಿರುದ್ಧ ಗಾಂಧಿ ಟ್ರಾನ್ಸ್‌ವಾಲ್‌ನಲ್ಲಿ ಮತ್ತೊಂದು ಶಾಂತಿಯುತ ಪ್ರತಿರೋಧ ಅಭಿಯಾನವನ್ನು ಆಯೋಜಿಸಿದರು. ಅವರು ಟ್ರಾನ್ಸ್ವಾಲ್ ಗಡಿಯುದ್ದಕ್ಕೂ ಸುಮಾರು 2,000 ಭಾರತೀಯರನ್ನು ಮುನ್ನಡೆಸಿದರು.

ಸ್ಫೂರ್ತಿಯ ಮೂಲಗಳು ವೈಯಕ್ತಿಕ ಮತ್ತು ನಿರಾಕಾರವಾಗಿರಬಹುದು. ಸ್ಫೂರ್ತಿಯ ವೈಯಕ್ತಿಕ ಮತ್ತು ನಿರಾಕಾರ ಮೂಲಗಳಿಗೆ ಸಂಬಂಧಿಸಿದಂತೆ, ಮೋಹನದಾಸ ಕರಮಚಂದ್ ಗಾಂಧಿ ಅವರೇ ಹೇಳಿದ್ದಾರೆ ! "ಮೂರು ಆಧುನಿಕರು ನನ್ನ ಜೀವನದ ಮೇಲೆ ಆಳವಾದ ಪ್ರಭಾವ ಬೀರಿದ್ದಾರೆ ಮತ್ತು ನನ್ನನ್ನು ಮೋಡಿ ಮಾಡಿದ್ದಾರೆ. ರಾಯಚಂದ್‌ಬಾಯ್ ಅವರ ಜೀವಂತ ಸಂಪರ್ಕದಿಂದ; ಟಾಲ್‌ಸ್ಟಾಯ್ ಅವರ "ದೇವರ ರಾಜ್ಯವು ನಿಮ್ಮೊಳಗಿದೆ" ಎಂಬ ಪುಸ್ತಕದ ಮೂಲಕ ಮತ್ತು ರಸ್ಕಿನ್ ಅವರ "ಈ ಕೊನೆಯವರೆಗೂ" ಮತ್ತು ಈ ಮೂರು ವ್ಯಕ್ತಿಗಳಲ್ಲದೆ, ಗೋಪಾಲಕೃಷ್ಣ ಗೋಖಲೆ ಮತ್ತು ಗೀತಾ ಮತ್ತು ಬೈಬಲ್ ಗಾಂಧಿಯವರಿಗೆ ಜೀವಮಾನದ ಉದ್ದದ ಮೂಲಗಳಾಗಿವೆ.

ಇದಲ್ಲದೆ, ಜೈನ ಕವಿ ಮತ್ತು ತತ್ವಜ್ಞಾನಿ ರಾಯಚಂದ್ ಭಾಯ್ ಅವರಿಂದ ಗಾಂಧಿಯವರು ಸ್ಫೂರ್ತಿ ಪಡೆದರು. ಅವರು ಗಾಂಧಿಯವರ ಆಧ್ಯಾತ್ಮಿಕ ಮಾರ್ಗದರ್ಶಕರಾಗಿದ್ದರು ಮತ್ತು ಗಾಂಧಿ ದಕ್ಷಿಣ ಆಫ್ರಿಕಾದಲ್ಲಿ ವಾಸವಾಗಿದ್ದಾಗ ಇಬ್ಬರೂ ಪತ್ರ ವ್ಯವಹಾರ ನಡೆಸಿದರು. ಬ್ರಿಟಿಷ್ ಕಲಾ ಇತಿಹಾಸಕಾರ ರಸ್ಕಿನ್ ಕೂಡ ಗಾಂಧಿಯವರ ಮೇಲೆ ಪ್ರಭಾವ ಬೀರಿದರು. ರಸ್ಕಿನ್ ಅವರ ಪುಸ್ತಕ ಅನ್ಟು ದಿಸ್ ಲಾಸ್ಟ್ ಗಾಂಧಿಯವರ ಮೇಲೆ ತೀವ್ರ ಪರಿಣಾಮ ಬೀರಿತು. ಆರ್ಥಿಕ ಅಸಮಾನತೆಯ ನೈತಿಕ ಅನ್ಯಾಯ ಮತ್ತು ಆಧುನಿಕ ಉತ್ಪಾದನಾ ವಿಧಾನಗಳ ಅನಪೇಕ್ಷಿತ ಸ್ವರೂಪವನ್ನು ಪುಸ್ತಕವು ಹೇಳಿದೆ. ರಸ್ಕಿನ್ ಕೆಲಸವು ಆಧ್ಯಾತ್ಮಿಕ ಘಟಕವನ್ನು ಹೊಂದಿದೆ ಮತ್ತು ಆಧುನಿಕ ಕೆಲಸವು ಸಾಮಾನ್ಯವಾಗಿ ಅನ್ಯಾಯ ಮತ್ತು ಅಮಾನವೀಯವಾಗಿದೆ ಎಂದು ನಂಬಿದ್ದರು. ರಸ್ಕಿನ್ ಅವರ ವಿಚಾರಗಳು ಗಾಂಧಿಯವರ ಆರ್ಥಿಕ ವಿಚಾರಗಳ ಮೇಲೆ ತೀವ್ರ ಪರಿಣಾಮ ಬೀರಿತು.

ಅಮ್ಮಿ. ಎ.ಸಿ. ಚಂದ್ರಕುಮಾರ್,

ಮೊ: 8861112906

E-mail: acammichandrakumar@gmail.com



ಆತ್ಮಸ್ಪರ್ಶಿ "ಗಾಂಧಿ"

(ನಾಟಕ)

ಸಾಹಿತ್ಯ – ಸಂಭಾಷಣೆ – ರಚನೆ : ಅಮ್ಮಿ ಎ.ಸಿ. ಚಂದ್ರಕುಮಾರ್

<u>ಪಾತ್ರ ವರ್ಗ</u>

ಅಪ್ಪನ ಪಾತ್ರಧಾರಿಗಳು	–	ಜನಾರ್ಧನ , ಕೃಷ್ಣ (ಕಿಟ್ಟಿ), ಸುಬ್ಬಯ್ಯ
ಅಮ್ಮನ ಪಾತ್ರಧಾರಿಗಳು	–	ಸರೋಜ, ಲಕ್ಷ್ಮಮ್ಮ, ಶಾಂತಮ್ಮ
ಮಕ್ಕಳ ಪಾತ್ರಧಾರಿಗಳು	–	ಧರಣೇಶ್, ವೇದಾಂತ, ಹರಿ
ಧರಣೇಶನ ತಂಗಿ	–	ಪಾರು
ವೇದಾಂತನ ತಂಗಿ	–	ಗೀತ
ಮಾಸ್ತರು	–	ಉಮೇಶಪ್ಪ

ಸಾಹುಕಾರ	–	ಮೋಹನಪ್ಪ
ಎಂ.ಎಲ್.ಎ.	–	ದೊಡ್ಡೇಗೌಡ
ವೈಯಾರಿ ಹೆಂಗಸು	–	ಲಕ್ಷ್ಮಿ
ಸಿಂಗ್ರಿ	–	ನಾಗಯ್ಯ (ಕ್ಷೌರಿಕಾ ಪಾತ್ರದಲ್ಲಿ ಹಾಸ್ಯ ಕಲಾವಿದ)

ಪ್ರಮುಖ ಪಾತ್ರದ ದೃಶ್ಯಗಳು {
- ಹೊಲ–ಗದ್ದೆ–ತೋಟ
- ಶಾಲೆ ಗ್ರಾಮಾಂತರ–ಸಾರಾಯಿ ಅಂಗಡಿ ಊರಾಚೆ
- ಮೂರು ಹಳ್ಳಿಯ ಮನೆಗಳು – ಸಾಹುಕಾರ ಮನೆ
- ಹಾಡು/ ಹಿನ್ನೆಲೆ ಧ್ವನಿಯ ಸಂಗೀತ